ನಮ್ಮ ಜನ
NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 150 | Volume - 01 Issue - 150
ಶೀರ್ಷಿಕೆ ಕೋಡ್: ಕೆಎಆರ್ ಕೆಎನ್ 28269 | Title- Code: KARKAN 28269
ಚಿತ್ರದುರ್ಗ | Chitradurga
ದಿನಾಂಕ: 27–12–2023 ಬುಧವಾರ | Date: 27-12-2023 Wednesday
ಪುಟ: 4 | Page: 4
ಬೆಲೆ : ರೂ.2–00 | Price: Rs. 2-00

ಒಳಪುಟದ ಸುದ್ದಿಗಳು
ರಸ್ತೆ ನಿರ್ಮಾಣದಲ್ಲಿ ಕ್ರಾಂತಿ ಮಾಡಿದ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ 2
ಸಾಣೇಹಳ್ಳಿಯಲ್ಲಿ ಡಿಸೆಂಬರ್ 31 ರಂದು 'ವರ್ಷದ ಹರ್ಷ' 3
ಗ್ರಾಮೀಣ ಭಾಗದ ಜನರಿಗೆ ಸಾರಿಗೆ ಸೌಲಭ್ಯ ಕೊರತೆಆಗದಂತೆ ಕ್ರಮ: ಶಾಸಕ 4

ಸುದ್ದಿ, ಜಾಹಿರಾತಿಗೆ
9686622252

ಶುಭ ನುಡಿ

ಬಟ್ಟೆ ನೋಡಿ ಗೆಳೆತನ ಮಾಡಬೇಡ, ಗುಣ ನೋಡಿ ಗೆಳೆತನ ಮಾಡು , ಯಾಕೆಂದರೆ ಬಟ್ಟೆ ಹರಿದು ಹೋಗುವ ತನಕ ಮಾತ್ರ ಇರುತ್ತದೆ, ಗುಣ ಸಾಯುವವರೆಗೂ ಇರುತ್ತದೆ !!

» ಶುಭೋದಯ

ಫಾಸ್ಟ್ ನ್ಯೂಸ್

ತಾಲೂಕು ಕೇಂದ್ರಗಳಿಗೆ ಇಂದು ಮಂತ್ರಾಕ್ಷತೆ ವಿತರಣಾ ಕಾರ್ಯಕ್ರಮ

» ಚಿತ್ರದುರ್ಗ

ಶ್ರೀರಾಮಜನ್ಮಭೂಮಿತೀರ್ಥಕ್ಷೇತ್ರಟ್ರಸ್ಟ್‌ವತಿಯಿಂದ ಅಯೋಧ್ಯೆಯಿಂದ ಬಂದಿರುವ ಮಂತ್ರಾಕ್ಷತೆಯನ್ನು ತಾಲೂಕು ಕೇಂದ್ರಗಳಿಗೆ ವಿತರಣಾ ಕಾರ್ಯಕ್ರಮ. ಡಿಸೆಂಬರ್ 27 ರಂದು ಬುಧವಾರ ಬೆಳಗ್ಗೆ 10.ಕ್ಕೆ ಚಿತ್ರದುರ್ಗ ನಗರದ ಡಿಸಿಸಿ ಬ್ಯಾಂಕ್ ಮುಂಭಾಗದಲ್ಲಿರುವ ಶ್ರೀರಾಮ ಮಂದಿರದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನಂತರ ನಗರದ ಪ್ರಮುಖ ಬೀದಿಗಳಲ್ಲಿ ಅಕ್ಷತೆಯ ಮೆರವಣಿಗೆ ಇರುತ್ತದೆ. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಮಠಾಧೀಶರು, ಪ್ರಮುಖರು, ಈ ಅಭಿಯಾನದ ಸಂಚಾಲಕರು, ಸಂಘ ಪರಿವಾರದ ಮುಖಂಡರು, ಕಾರ್ಯಕರ್ತರು ಭಾಗಿಯಾಗಲಿದ್ದಾರೆ.

ನಿರ್ಮಾಣ ಕಟ್ಟಡದಿಂದ ಆಯತಪ್ಪಿ ಬಿದ್ದು ಕೂಲಿಕಾರ್ಮಿಕ ಸಾವು

» ಚಳ್ಳಕೆರೆ

ನಗರದ ಕಾಟಪ್ಪನಹಟ್ಟಿ ನಿವಾಸಿ ಕೂಲಿಕಾರ್ಮಿಕ ಸಂತೋಷ್‌ಕುಮಾರ್(40)(ಕುಮಾರಸ್ವಾಮಿ) ಬಳ್ಳಾರಿ ರಸ್ತೆಯ ಅಬ್ಬಾಸ್‌ಪವರ್‌ರವರ ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ಸಿಮೆಂಟ್ ಚೀಲ ಹೊತ್ತು ಮೇಲೇರುವಾಗ ಆಯತಪ್ಪಿ ಕೆಳಗೆ ಬಿದ್ದು ಆಸ್ಪತ್ರೆಗೆ ದಾಖಲಾಗಿ ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುತ್ತಾನೆ. ಮೃತನ ತಾಯಿ ಸಣ್ಣಪಾಲಮ್ಮ ಈ ಬಗ್ಗೆ ಪೊಲೀಸರಿಗೆ ದೂರು ನೀಡಿ, ಕಂಟ್ರಾಕ್ಟರ್ ಜಿ.ಪಿ.ಪಾಲಣ್ಣ, ಬಿಲ್ಡಿಂಗ್ ಮಾಲೀಕ ಅಬ್ಬಾಸ್‌ಪವರ್ ಸೂಕ್ತ ಮುಂಜಾಗ್ರತೆ ಕ್ರಮವಿಲ್ಲದೆ ನನ್ನಮಗನ ಸಾವಿಗೆ ಕಾರಣರಾಗಿದ್ದಾರೆಂದು ದೂರು ನೀಡಿದ್ದು ಪಿಎಸ್‌ಐ ಕೆ.ಸತೀಶ್‌ನಾಯ್ಕ ಪ್ರಕರಣ ದಾಖಲಿಸಿ ತನಿಖೆ ಮುಂದುವರೆಸಿದ್ದಾರೆ.

ಜನವರಿ 6 ರಂದು ಜಿಲ್ಲಾ ಮಟ್ಟದ ಜನತಾ ದರ್ಶನ

» ಚಿತ್ರದುರ್ಗ

ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ನೇತೃತ್ವದಲ್ಲಿ ಜನವರಿ 6 ರಂದು ಬೆಳಗ್ಗೆ 10.30 ಗಂಟೆಗೆ ಚಳ್ಳಕೆರೆಯ ಶ್ರೀ ಗುರು ರಾಘವೇಂದ್ರ ಕಲ್ಯಾಣ ಮಂಟಪದಲ್ಲಿ ಜಿಲ್ಲಾಮಟ್ಟದ ಜನತಾ ದರ್ಶನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಈ ಹಿಂದೆ ಡಿಸೆಂಬರ್ 27 ರಂದು ಏರ್ಪಡಿಸಲು ಉದ್ದೇಶಿಸಲಾಗಿದ್ದ ಜಿಲ್ಲಾ ಮಟ್ಟದ ಜನತಾ ದರ್ಶನವನ್ನು ಚಳ್ಳಕೆರೆ ತಹಶಿಲ್ದಾರ ವರದಿ ಅನ್ವಯ ಜನವರಿ 6 ಕ್ಕೆ ಮುಂದೂಡಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ತಿಳಿಸಿದ್ದಾರೆ. ಸಾರ್ವಜನಿಕರ ಕುಂದು ಕೊರತೆಗಳನ್ನು ಸ್ಥಳೀಯ ಮಟ್ಟದಲ್ಲಿ ನಿವಾರಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳ ಸೂಚನೆಯಂತೆ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಪ್ರತಿ ತಿಂಗಳು ಜಿಲ್ಲಾಮಟ್ಟದ ಜನತಾ ದರ್ಶನ ಏರ್ಪಡಿಸಲಾಗುತ್ತಿದೆ. ಜಿಲ್ಲಾಮಟ್ಟದ ಎಲ್ಲ ಅಧಿಕಾರಿಗಳು, ಜನಪ್ರತಿನಿಧಿಗಳು ಜನತಾ ದರ್ಶನದಲ್ಲಿ ಉಪಸ್ಥಿತರಿರುವರು. ಸಾರ್ವಜನಿಕರಿಂದ ಅರ್ಜಿಗಳನ್ನು ಪಡೆದು ಸ್ವೀಕೃತಿ ನೀಡುವ ಸಲುವಾಗಿ ಸಮರ್ಪಕ ರೀತಿಯಲ್ಲಿ ಕೌಂಟ□□ಗಳ ವ್ಯವಸ್ಥೆ ಮಾಡಲಾಗುವುದು. ಸಾರ್ವಜನಿಕರು ತಮ್ಮ ಕುಂದುಕೊರತೆ ಕುರಿತ ಅಹವಾಲು, ಅರ್ಜಿಗಳನ್ನು ಜನವರಿ 6 ರಂದು ಜರಗುವ ಜನತಾ ದರ್ಶನದಲ್ಲಿ ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನಿರಂತರ ಹೋರಾಟದ ಫಲವಾಗಿ ಕಾಡುಗೊಲ್ಲ ಜಾತಿ ಪ್ರಮಾಣ ನೀಡಲು ಸರ್ಕಾರ ತಿರ್ಮಾನ

ಕಾಡುಗೊಲ್ಲ ಸಮಾಜಕ್ಕೆ ಒಳ್ಳೆಯದಾಗಲಿ ಎಂದು ಶುಭ ಹಾರೈಸಿದ ಶಾಸಕ ಟಿ.ರಘುಮೂರ್ತಿ ಮತ್ತು ಎನ್.ವೈ.ಗೋಪಾಲಕೃಷ್ಣ

» ಚಳ್ಳಕೆರೆ

ಕಳೆದ ಕೆಲವು ತಿಂಗಳುಗಳ ಹೋರಾಟದ ನಂತರ ಸರ್ಕಾರ ಕಾಡುಗೊಲ್ಲ ಜನಾಂಗಕ್ಕೆ ಜಾತಿ ಪ್ರಮಾಣ ಪತ್ರ ನೀಡುವ ಕುರಿತು ಸ್ಪಷ್ಟನಿರ್ಧಾರ ಕೈಗೊಂಡಿದ್ದು, ಅರ್ಜಿ ಸಲ್ಲಿಸಿದವರಿಗೆ ಪರಿಶೀಲನೆ ನಡೆಸಿ ಕಾಡುಗೊಲ್ಲಜಾತಿಪ್ರಮಾಣ ಪತ್ರ ನೀಡಲು ಸರ್ಕಾರ ಸೂಚನೆ ನೀಡಿದ್ದು, ತಾಲ್ಲೂಕಿನ ಸಮಸ್ತ ಕಾಡುಗೊಲ್ಲ ಸಮುದಾಯ ಅಗತ್ಯದಾಖಲಾತಿ ಒದಗಿಸಿ ಪ್ರಮಾಣಪತ್ರ ಪಡೆಯುವಂತೆ ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದ ಶಾಸಕ ಎನ್.ವೈ. ಗೋಪಾಲಕೃಷ್ಣ ತಿಳಿಸಿದರು.

ಅವರು, ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಶಾಸಕ ಟಿ.ರಘುಮೂರ್ತಿಯವರೊಂದಿಗೆ ಕಾಡುಗೊಲ್ಲ ಜಾತಿಪ್ರಮಾಣ ಪತ್ರ ನೀಡುವ ಬಗ್ಗೆ ಸರ್ಕಾರದ ನಿರ್ಧಾರವನ್ನು ಸಮುದಾಯದ ಮುಖಂಡರಿಗೆ ತಿಳಿಸಿ ತಾಲ್ಲೂಕು ಆಡಳಿತವೂ ಸಹ ತ್ವರಿತಗತಿಯಲ್ಲಿ ಪರಿಶೀಲನೆ ನಡೆಸಿ ದಾಖಲಾತಿ ನೀಡಲು ನಿರ್ದೇಶನ ನೀಡಿದರು.

ಶಾಸಕ ಟಿ.ರಘುಮೂರ್ತಿ ಮಾತನಾಡಿ ಕಾಡುಗೊಲ್ಲ ಜನಾಂಗದ ನಿರಂತರ ಹೋರಾಟ ಸಹ ತ್ವರಿತಗತಿಯಲ್ಲಿ ಜಾತಿಪ್ರಮಾಣ ಪತ್ರ ಪಡೆಯಲು ಸಹಾಯಕವಾಗಿವೆ. ನಾನು ಮತ್ತು ಶಾಸಕರಾದ ಗೋಪಾಲಕೃಷ್ಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಿ.ಸುಧಾಕರ್, ಸಂಬಂಧಪಟ್ಟ ಸಚಿವರು ಹಾಗೂ ಇಲಾಖೆ ಕಾರ್ಯದರ್ಶಿಗಳೊಂದಿಗೆ ಚರ್ಚೆ ನಡೆಸಿ ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಡುಗೊಲ್ಲ ಸಮುದಾಯದವಿದ್ದು ಸೌಲಭ್ಯ ಪಡೆಯಲು ಪ್ರಮಾಣ ಪತ್ರ ಅವಶ್ಯಕತೆ ಇದೆ. ಅರ್ಜಿ ಸಲ್ಲಿಸಿದವರ ಮಾಹಿತಿಯನ್ನು ಕೂಡಲೇ ಕ್ರೋಢೀಕರಿಸಿ ಪ್ರಮಾಣ ಪತ್ರ ನೀಡಿ. ವಿಳಂಬ ಮಾಡಿದರೆ ಮತ್ತೆ ಸಮಸ್ಯೆ ಉದ್ಭವವಾಗಲಿದ್ದು, ಸರ್ಕಾರದ ಸೂಚನೆಯಂತೆ ಅವರುಗಳಿಗೆ ಜಾತಿಪ್ರಮಾಣ ಪತ್ರ ನೀಡಬೇಕು ಎಂದರು. ಕಾಡುಗೊಲ್ಲ ಸಮುದಾಯ ತಮ್ಮ ದಾಖಲಾತಿಗಳಲ್ಲಿ ಕಾಡುಗೊಲ್ಲರು ಎಂದು ನಮೂದಿಸಬೇಕಾದರೆ ನಿಮ್ಮಲ್ಲಿಗೆ ಸಮೀಕ್ಷೆಗೆ ಬಂದಾಗಲೂ ಕಾಡುಗೊಲ್ಲರು ಎಂದು ಬರೆಸುವಂತೆ ಶಾಸಕ ರಘುಮೂರ್ತಿ ಸಲಹೆ ನೀಡಿದರು.

> ಕಾಡುಗೊಲ್ಲ ಸಮುದಾಯಕ್ಕೆ ಪ್ರಮಾಣ ಪತ್ರ ನೀಡಲು ಸರ್ಕಾರ ನಿರ್ಧಾರ ಮಾಡಿರುವುದು ಆ ಸಮಾಜಕ್ಕೆ ಹೆಚ್ಚು ಅನುಕೂಲವಾಗಲಿದೆ.ನಮ್ಮ ಕ್ಷೇತ್ರದಲ್ಲಿ ಅತಿ ಹೆಚ್ಚು ಕಾಡುಗೊಲ್ಲ ಸಮುದಾಯವಿದ್ದು ಸೌಲಭ್ಯ ಪಡೆಯಲು ಪ್ರಮಾಣ ಪತ್ರ ನೆರವಾಗಲಿದೆ.
>
> » ಟಿ.ರಘುಮೂರ್ತಿ ಶಾಸಕರು ಚಳ್ಳಕೆರೆ

ಅಧ್ಯಕ್ಷ ಬೂದಿಹಳ್ಳಿ ರಾಜಣ್ಣ ಮಾತನಾಡಿ, ಕಾಡುಗೊಲ್ಲ ಸಮುದಾಯಕ್ಕೆ ಜಾತಿಪ್ರಮಾಣಪತ್ರ ನೀಡುವಕುರಿತು ಶಾಸಕದ್ವಯರು ಇಂದು ಸಭೆ ನಡೆಸಿ ಪ್ರಾಯೋಗಿಕವಾಗಿ 9 ಜನರಿಗೆ ಕಾಡುಗೊಲ್ಲ ಜಾತಿಪ್ರಮಾಣ ಪತ್ರ ವಿತರಿಸಿದ್ದು, ಇದು ಕಾಡುಗೊಲ್ಲ ಸಮುದಾಯಕ್ಕೆ ಹೆಚ್ಚು ಸಂತಸ ತಂದಿದೆ.

ಜನಾಂಗದ ಪರವಾಗಿ ಇಬ್ಬರೂ ಶಾಸಕರನ್ನು ಸನ್ಮಾನಿಸಿ ಅಭಿನಂದಿಸಿದರಲ್ಲದೆ, ಕರ್ನಾಟಕದಲ್ಲಿ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಕಾಡುಗೊಲ್ಲ ಜನಾಂಗ ಹೆಚ್ಚಾಗಿದೆ. 45 ತಾಲ್ಲೂಕುಗಳಲ್ಲಿ ಸುಮಾರು 10ಲಕ್ಷಕ್ಕೂ ಹೆಚ್ಚು ಕಾಡುಗೊಲ್ಲ ಜನರು ರಾಜ್ಯದಲ್ಲಿ ಇದ್ದಾರೆ. ಚಳ್ಳಕೆರೆ ತಾಲ್ಲೂಕಿನಲ್ಲಿ ಕಾಡುಗೊಲ್ಲ ಸಂಘ ಅಧಿಕವಾಗಿದ್ದು ತಾಲ್ಲೂಕು ಆಡಳಿತ ವಿಳಂಬಮಾಡದೆ ಅರ್ಜಿ ಪಡೆಯಲು ಜಾತಿಪ್ರಮಾಣ ಪತ್ರ ನೀಡಬೇಕೆಂದು ಮನವಿ ಮಾಡಿದರು.

ಸಭೆಯಲ್ಲಿ ತಹಶೀಲ್ದಾರ್ ರೇಹಾನ್ ಪಾಷ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಬಾಲರಾಜು, ರವಿಕುಮಾರ್, ಮುಖಂಡರಾದ ಬಿ.ವಿ.ಸಿರಿಯಣ್ಣ, ಮಂಜುನಾಥ, ಮೂಡಲಗಿರಿಯಪ್ಪ, ಶ್ರೀಕಂಠಪ್ಪ, ಶ್ರೀಕಾಂತ್, ಶಶಿಧರ, ಅಜ್ಜಣ್ಣ, ರಂಗಸ್ವಾಮಿ, ಭಾನುವೀರೇಶ್, ಆಂಜಿನಪ್ಪ, ಎಂ.ಜೆ.ರಾಘವೇಂದ್ರ, ಎನ್.ಮಂಜುನಾಥ ಮುಂತಾದವರು ಉಪಸ್ಥಿತರಿದ್ದರು.

ಯುವನಿಧಿ ಯೋಜನೆ: ಅರ್ಜಿ ಆಹ್ವಾನಕ್ಕೆ ಚಾಲನೆ

» ಚಿತ್ರದುರ್ಗ

ಜಿಲ್ಲಾಧಿಕಾರಿ ಜಿ.ಆರ್.ಜೆ ದಿವ್ಯಪ್ರಭು ಅವರು ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಂಗಳವಾರ ಯುವನಿಧಿ ಯೋಜನೆಯ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಯೋಜನೆ ನೋಂದಣಿ ಪ್ರಕ್ರಿಯೆಗೆ ಚಾಲನೆ ನೀಡಿದರು.



ಸರ್ಕಾರದ ಗ್ಯಾರೆಂಟಿ ಯೋಜನೆಗಳಲ್ಲಿ ಒಂದಾದ ಯುವನಿಧಿ ಯೋಜನೆ ಬರುವ ಜನವರಿ ಮಾಹೆಯಿಂದ ರಾಜ್ಯದಲ್ಲಿ ಜಾರಿಯಾಗಲಿದೆ. ಈ ಯೋಜನೆಯಡಿಯಲ್ಲಿ 2022–23ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಾಂಗ ಮಾಡಿ, 2023 ತೇರ್ಗಡೆಯಾದ ಮತ್ತು ಫಲಿತಾಂಶ ಪ್ರಕಟಗೊಂಡ 180 ದಿನ ಅಥವಾ 6 ತಿಂಗಳ ಒಳಗಡೆ ಕೆಲಸ ದೊರೆಯದ ನಿರುದ್ಯೋಗಿ ಅರ್ಹ ಪದವೀಧರರಿಗೆ ರೂ. 3.000 ಹಾಗೂ ಡಿಪ್ಲೋಮಾ ತೇರ್ಗಡೆಯಾದವರಿಗೆ ರೂ. 1.500 ಮಾಸಿಕ ನಿರುದ್ಯೋಗ ಭತ್ಯೆಯನ್ನು ಆಧಾರ ಜೋಡಣೆಯ ಅಭ್ಯರ್ಥಿಗಳ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ ಮಾಡಲಾಗುವುದು.

ಕರ್ನಾಟಕದಲ್ಲಿ ವಾಸವಿದ್ದು ಕನಿಷ್ಠ 6 ವರ್ಷಗಳವರೆಗೆ ಪದವಿ ಹಾಗೂ ಡಿಪ್ಲೋಮೊ ಅಧ್ಯಯನ ಮಾಡಿದವರು. ಉನ್ನತ ವ್ಯಾಸಾಂಗ ಮುಂದುವರಿಸದೇ ಇರುವವರು. ಖಾಸಗಿ ಉದ್ಯೋಗ ಅಥವಾ ಸ್ವಯಂ ಉದ್ಯೋಗ ಇಲ್ಲದವರು ಯೋಜನೆ ಲಾಭ ಪಡೆಯಲು ನೋಂದಣಿ ಮಾಡಿಕೊಳ್ಳಬಹುದಾಗಿದೆ.

ಪುಟ ↘ 2

ದತ್ತಮಾಲಾಧಾರಿಗಳಿಂದ ನಗರ ಸಂಕೀರ್ತನ ಯಾತ್ರೆ

» ಹೊಸದುರ್ಗ

ವಿಶ್ವ ಹಿಂದೂ ಪರಿಷತ್ ಬಜರಂಗದಳದ ವತಿಯಿಂದ ನಡೆದ ದತ್ತ ಮಾಲಾ ಅಭಿಯಾನ ಹಾಗೂ ನಗರ ಸಂಕೀರ್ತನ ಯಾತ್ರೆಯಲ್ಲಿ ನೂರಾರು ಸಂಖ್ಯೆಯ ಕಾರ್ಯಕರ್ತರು ಪಟ್ಟಣದ ಮದಕರಿ ವೃತ್ತದ ಸಮೀಪದ ಶ್ರೀ ರಾಘವೇಂದ್ರ ಮಠದಲ್ಲಿ ಸೋಮವಾರ ಸಂಜೆ ದತ್ತ ಮಾಲೆ ಧರಿಸಿದರು.

ಪುಟ ↘ 2

ಪ್ರಮುಖ ಸುದ್ದಿ

ವಿವಿಧ ಬೇಡಿಕೆಗೆ ಆಗ್ರಹಿಸಿ ಕಟ್ಟಡ ಕಾರ್ಮಿಕರ ಪ್ರತಿಭಟನೆ

» ಚಿತ್ರದುರ್ಗ

ನೋಂದಾಯಿತ ಕಟ್ಟಡ ಕಾರ್ಮಿಕರ ಸಹಜ ಸಾವಿಗೆ ರೂ.5 ಲಕ್ಷ ನೀಡಬೇಕು. ಮನೆಗಳ ನಿರ್ಮಾಣಕ್ಕೆ ರೂ.5 ಲಕ್ಷ ಮತ್ತು ಪಿಂಚಣಿ ರೂ.5000 ಪ್ರತಿ ತಿಂಗಳು ನೀಡುವಂತೆ ಸೇರಿ ವಿವಿಧ ಬೇಡಿಕೆಯನ್ನು ಈಡೇರಿಸುವಂತೆ ಆಗ್ರಹಿಸಿ ಇಂದು ಕರ್ನಾಟಕ ಸ್ಟೇಟ್ ಬಿಲ್ಡಿಂಗ್ ಮತ್ತು ಇತರೆ ಕಟ್ಟಡ ಕಾರ್ಮಿಕರ ಕ್ಷೇಮಾಭೀವೃದ್ಧಿ ಸಂಘದಿಂದ ಪ್ರತಿಭಟನೆಯನ್ನು ನಡೆಸಿ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಲಾಯಿತು.

ರಾಜ್ಯದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಉಚಿತವಾಗಿ ನೀಡುತ್ತಿರುವ ಕಾರ್ಯಕ್ರಮಗಳಾದ ಮಹಿಳೆಯರಿಗೆ ರೂ.2000/– ಪ್ರತಿ ತಿಂಗಳಿಗೆ, 200 ಯುನಿಟ್‌ವರೆಗೆ ಉಚಿತ ವಿದ್ಯುತ್, ಮಹಿಳೆಯರಿಗೆ ಉಚಿತ ಪ್ರಯಾಣಕ್ಕಾಗಿ ಬಸ್ ವ್ಯವಸ್ಥೆ, ಇವೆಲ್ಲಾ ಕಾರ್ಯಕ್ರಮಗಳನ್ನು ನಿಲ್ಲಿಸಬೇಕು. ಅಭಿವೃದ್ಧಿ ಕಾರ್ಯಕ್ರಮಗಳನ್ನು ರಾಜ್ಯದಲ್ಲಿ ಕೈಗೊಳ್ಳಬೇಕು. ರಾಜ್ಯದಲ್ಲಿ ನೋಂದಾಯಿತ ಗುತ್ತಿಗೆದಾರರು ಪ್ರಾಣ ಕಳೆದುಕೊಳ್ಳುವ ಪರಿಸ್ಥಿತಿಗೆ ಬಂದಿದ್ದಾರೆ. ತಮ್ಮ ನೇತೃತ್ವದ ಸರ್ಕಾರ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದ ಕಾಮಗಾರಿಗಳ ಬಿಲ್ ತಡೆಹಿಡಿದಿರುವುದರಿಂದ ಕಬ್ಬಿಣ, ಸಿಮೆಂಟ್ ವ್ಯಾಪಾರಿಗಳು, ಜಲ್ಲಿ ಮರಳು ಸಾಗಾಣಿಕೆದಾರರು ಮತ್ತು ಕಟ್ಟಡ ಕಾರ್ಮಿಕರಿಗೆ ತುಂಬಾ ಅನ್ಯಾಯ ಉಂಟಾಗಿರುತ್ತದೆ. ಮಾಡಿದ ಕೆಲಸಕ್ಕೆ ಹಣವೂ ಇಲ್ಲ ಇತ್ತ ಕೆಲಸವೂ ಇಲ್ಲದೇ ಅಲೆದಾಡುವ ಪರಿಸ್ಥಿತಿ ಬಂದು ರಾಜ್ಯದಲ್ಲಿ ನಿರುದ್ಯೋಗ ಉಲ್ಬಣವಾಗಿರುತ್ತದೆ. ದುಡಿಯುವ ಕೈಗಳಿಗೆ ಕೆಲಸ ನೀಡಬೇಕಾದ ಸರ್ಕಾರ ಉಚಿತ ಕಾರ್ಯಕ್ರಮಗಳ ಘೋಷಣೆಯಿಂದ ಯಾವುದೇ ಅಭಿವೃದ್ಧಿ ಕಾರ್ಯಗಳು ಇಲ್ಲದಂತೆ ಮಾಡಲಾಗಿದೆ ಎಂದರು.

ನೊಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳ 2022–23ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿ ಶೇಕಡ 70% ಕಡಿತಗೊಳಿಸಿರುವುದನ್ನು ನಮ್ಮ ಸಂಘವು ಖಂಡಿಸುತ್ತದೆ. ಈಗ ಜಮಾಮಾಡಿರುವ ವಿದ್ಯಾರ್ಥಿ ವೇತನ ಸರಿಯಾಗಿ ಇಂದಿನವರೆಗೂ ಜಮಾ ಆಗಿರುವುದಿಲ್ಲ. ತ್ವರಿತವಾಗಿ ನಿಮಾನುಸಾರ ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ಆದೇಶದಂತೆ ನೀಡಬೇಕೆಂದು ಆಗ್ರಹಿಸಿದ್ದು, ಸೆಸ್ ಹಣವನ್ನು ಕೆಲಸವನ್ನು ಯಾವುದೇ ಸರ್ಕಾರಳು ಮಂಡಳಿ ರಚನೆ ಆದಾಗಿನಿಂದ ಸೆಸ್ ವಸೂಲಿ ಮಾಡದೇ ಇರುವುದು ಮಂಡಳಿಗೆ ಹಾಗೂ ನೋಂದಾಯಿತ ಕಟ್ಟಡ ಕಾರ್ಮಿಕರ ಭದ್ರತೆಗೆ ಅನ್ಯಾಯವನ್ನುಂಟು ಮಾಡುವಂತಾಗಿದೆ. ಸೆಸ್ ವಸೂಲಿ ಪ್ರಾಧಿಕಾರಜಾರಿಯಾದಲ್ಲಿಮಂಡಳಿಗೆನೀರು ಹರಿದು ಬಂದಂತೆ ಹಣ ಹರಿದು ಬರುತ್ತದೆ. ಆದ್ದರಿಂದ ಈ ಒಂದು ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಸೆಸ್ ವಸೂಲಿ ಪ್ರಾಧಿಕಾರ ರಚನೆಮಾಡಬೇಕೆಂದು ಆಗ್ರಹಿಸಲಾಯಿತು.

ನೋಂದಾಯಿತ ಕಟ್ಟಡ ಕಾರ್ಮಿಕನ ಸಹಜ ಸಾವಿಗೆ ಕೇವಲ 74 ಸಾವಿರ ರೂಪಾಯಿಗಳನ್ನು ನೀಡುತ್ತಿರುವುದು ಮೃತ ವ್ಯಕ್ತಿಯ ಅವಲಂಭಿತ ಕುಟುಂಬದವರಿಗೆ ತುಂಬಾ ಅನ್ಯಾಯವನ್ನುಂಟು ಮಾಡಲಾಗುತ್ತಿದೆ. ಕಟ್ಟಡ ಕಾರ್ಮಿಕರ ಸಾವಿಗೆ 5 ಲಕ್ಷ ರೂ.ಗಳನ್ನು ಪರಿಹಾರವಾಗಿ ನೀಡಬೇಕು, ಮಹಿಳಾ ಕಾರ್ಮಿಕಳಿಗೆ ಹೆರಿಗೆ ಭತ್ಯೆ ಬಾಂಡ್ ರೂಪದಲ್ಲಿ ನೀಡುತ್ತಿರುವುದು ಸರಿಯಾದ ಕ್ರಮವಲ್ಲ. ಮಹಿಳಾ ಕಾರ್ಮಿಕಳು ಹೆರಿಗೆಯಾದ ನಂತರ ಅವಳಿಗೆ ಆಕೆಯ ಮಗುವಿಗೆ ಆರೋಗ್ಯ, ಪೋಷಣೆ. ಇತ್ಯಾದಿ 3.ಈ ಅಗತ್ಯಕ್ಕಾಗಿ ಹಣದ ಅಗತ್ಯವಿರುತ್ತದೆ. ಆದ್ದರಿಂದ ಬಾಂಡ್ ರೂಪದ ಹಣ ಪಾವತಿಯನ್ನು ತೆಗೆದು ನೇರ ನಗದು ವರ್ಗಾವಣೆ ಮಾಡಬ

ಚಿನ್ನದ ಬೆಲೆ	
91.6 ಕೆಡಿಎಂ (ಗ್ರಾಂ)	5500
85 ಕೆಡಿಎಂ (ಗ್ರಾಂ)	5100

ಬೆಳ್ಳಿ ಬೆಲೆ	
ಕೆಜಿ	63500

ರಸ್ತೆ ನಿರ್ಮಾಣದಲ್ಲಿ ಕ್ರಾಂತಿ ಮಾಡಿದ ಅಟಲ್

■ ಜನಾಶಯಪ್ರಭ ಚಿತ್ರದುರ್ಗ

ಅಟಲ್ ಬಿಹಾರಿ ವಾಜಪೇಯಿರವರು ತಮ್ಮ ಅಧಿಕಾರದ ಸಮಯದಲ್ಲಿ ಉತ್ತಮವಾದ ಆಡಳಿತವನ್ನು ನೀಡಿದ್ದಲ್ಲದೆ, ದೇಶಕ್ಕೆ ಉತ್ತಮವಾದ ರಸ್ತೆಗಳನ್ನು ನೀಡುವುದರ ಮೂಲಕ ಸುಗಮ ಸಂಚಾರಕ್ಕೆ ದಾರಿಯನ್ನು ಮಾಡಿಕೊಟ್ಟಿದ್ದಾರೆ ಇಂದು ಅವರನ್ನು ನೆನೆಯುವುದು ಅಗತ್ಯವಾಗಿದೆ ಎಂದು ಭಾರತೀಯ ಜನತಾ ಪಾರ್ಟಿ ಮಾಜಿ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜನ್ ತಿಳಿಸಿದರು.

ನಗರದ ಬಿಜೆಪಿ ಕಾರ್ಯಾಲಯದಲ್ಲಿ ಇಂದು ಮಾಜಿ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿಯವರ 99ನೇ ಜನ್ಮ ದಿನಾಚರಣೆಯ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ನಗರದಲ್ಲಿನ ಉತ್ತಮವಾದ ರಸ್ತೆಗಳನ್ನು ನಿರ್ಮಾಣ ಮಾಡಿಕೊಟ್ಟಿದ್ದಲ್ಲದೆ ಗ್ರಾಮಾಂತರ ಪ್ರದೇಶದಲ್ಲಿಯೂ ಸಹಾ ಉತ್ತಮವಾದ ಸಂಪರ್ಕ ರಸ್ತೆಗಳನ್ನು ನಿರ್ಮಾಣ ಮಾಡುವುದರ ಮೂಲಕ ಗ್ರಾಮ ಮತ್ತು ನಗರವನ್ನು ಕೂಡಿಸುವ ಸಂಪರ್ಕವನ್ನು ನಿರ್ಮಾಣ ಮಾಡಿದರು, ಇದಲ್ಲದೆ ಸರ್ವ ಶಿಕ್ಷಾ ಅಭೀಯಾನದಡಿಯಲ್ಲಿ ಉತ್ತಮವಾದ ಶಾಲಾ ಕೊಠಡಿಗಳನ್ನು ನಿರ್ಮಾಣ ಮಾಡುವುದರ ಮೂಲಕ ಮಕ್ಕಳ ಕಲಿಕೆಗೆ ನರವಾದರು ಎಂದರು.

ರಸ್ತೆಗಳ ನಿರ್ಮಾಣದಲ್ಲಿ ಕ್ರಾಂತಿಯನ್ನು ಮಾಡಿದ ವಾಜಪೇಯಿಯವರು ತಮ್ಮ ಅಧಿಕಾರದ ಅವಧಿಯಲ್ಲಿ ದೇಶದ ಹಲವಾರು ಕಡೆಯಲ್ಲಿ ಉತ್ತಮವಾದ ರಸ್ತೆಗಳನ್ನು ನಿರ್ಮಾಣಕ್ಕೆ ಮುಂದಾದರು, ಒಂದು ಕಾಲದಲ್ಲಿ ಹದಗೆಟ್ಟಿದ್ದ ರಸ್ತೆಗಳನ್ನು ಉತ್ತಮವಾದ ರಸ್ತೆಗಳನ್ನು ನಿರ್ಮಾಣ ಮಾಡಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದು ವಾಜಪೇಯಿಯವರು ಎಂದ ಅವರು, ಆಡಳಿತದಲ್ಲಿಯೂ ಸಹಾ ಹಲವಾರು ಸುಧಾರಣೆಗಳನ್ನು ತರುವುದರ ಮೂಲಕ ಉತ್ತಮ ಆಡಳಿತಗಾರ ಎಂದು ಹೆಸರನ್ನು ಪಡೆದಿದ್ದರು. ಸಂಸತ್ ಸದಸ್ಯರಾಗಿ ಆಜಾತ ಶತ್ರುವಾಗಿ ಕೆಲಸವನ್ನು ಮಾಡಿದರು. ಬಿಜೆಪಿ ದೇಶದಲ್ಲಿ ಇಷ್ಟರ ಮಟ್ಟಿಗೆ ಬೆಳೆಯಲು ಹಲವಾರು ಜನರಲ್ಲಿ ಇವರು ಸಹಾ ಕಾರಣರಾಗಿದ್ದಾರೆ ಎಂದು ತಿಳಿಸಿದರು.

ವಾಜೀಪೇಯಿಯವರ ತತ್ವ ಸಿದ್ಧಾಂತವನ್ನು ಇಂದು ನಾವುಗಳು ಅಳವಡಿಸಿಕೊಳ್ಳಬೇಕಿದೆ ಬಿಜೆಪಿ ಎಂದು ಸಹಾ ಆಧಿಕಾರಕ್ಕಾಗಿ ಮುಂದಾಗಿಲ್ಲ ಜನ ಸೇವೆಯನ್ನು ತನ್ನ ಗುರಿಯನ್ನಾಗಿ ಮಾಡಿಕೊಂಡಿದೆ. ವಾಜಪೇಯಿಯವರು ಯಾವುದೇ ಉಚಿತ ಗ್ಯಾರೆಂಟಿಯನ್ನು ನೀಡುವು ಬದಲು ಪ್ರಜೆಗಳಿಗೆ ಉಚಿತವಾಗಿ ಶಿಕ್ಷಣ ಮತ್ತು ಆರೋಗ್ಯವನ್ನು ನೀಡುವಂತೆ ತಿಳಿಸಿದ್ದರು. ಅದನ್ನು ನೀಡಿದಾಗ ಉಳಿದವನ್ನು ಜನರೆ ಮಾಡಿಕೊಳ್ಳುತ್ತಾರೆ ಎಂಬ ನಂಬಿಕೆ ಅವರಲ್ಲಿ ಇತ್ತು ಎಂದರು.

ಬಿಜೆಪಿ ಮುಖಂಡರಾದ ಡಾ.ಸಿದ್ದಾರ್ಥ ಮಾತನಾಡಿ, ವಾಜಪೇಯಿಯವರು ದೇಶದ ಪ್ರಧಾನ ಮಂತ್ರಿಯಾಗುವುದಕ್ಕಿಂತ ಮುಂಚೆ ನಮ್ಮ ದೇಶದ ರಸ್ತೆಗಳು ಸರಿಯಿರಲಿಲ್ಲ, ಅವರು ಪ್ರಧಾನ ಮಂತ್ರಿಗಳಾದ ಮೇಲೆ ಉತ್ತಮವಾದ ರಸ್ತೆಯನ್ನು ನೀಡುವುದರ ಮೂಲಕ ಸಾರಿಗೆ ಸಂಪರ್ಕದಲ್ಲಿ ಸಾಧನೆಯನ್ನು ಮಾಡಿದರು. ದೇಶದ ಬದಲಾವಣೆಯಲ್ಲಿ ಶಕ್ತಿಯನ್ನು ತುಂಬಿದವರು ವಾಜಪೇಯಿಯಾಗಿದ್ದಾರೆ ಎಂದರು.

ನಗರಾಧ್ಯಕ್ಷ ನವೀನ್ ಚಾಲುಕ್ಯ ಮಾತನಾಡಿ, ವಾಜೀಪೇಯಿಯವರು ಅಜಾತ ಶತ್ರುಗಳಾಗಿದ್ದರು ಯಾರನ್ನು ಸಹಾ ಕೀಳಾಗಿ ಕಾಣುತಿರಲಲ್ಲ, ಎಲ್ಲರನ್ನು ಸಮಾನರಾಗಿ ಕಂಡು ಆತ್ಮೀಯವಾಗಿ ಮಾತನಾಡುಸುತ್ತಿದ್ದರು. ಚಿತ್ರದುರ್ಗದಿಂದ ಬೆಂಗಳೂರಿಗೆ ಹೋಗಿ ಬರಬೇಕಾದರೆ ಹರ ಸಾಹಸವನ್ನು ಮಾಡಬೇಕಿತ್ತು ಆದರೆ ಇಂದು ವಾಜಿಪೇಯಿರವರು ನೀಡಿದ ಉತ್ತಮವಾದ ರಸ್ತೆಯಿಂದಾಗಿ ಯಾವುದೇ ಅಫಘಾತ ಇಲ್ಲದೆ ಸುಗಮವಾಗಿ ಹೋಗಿ ಬರಲಾಗುತ್ತಿದೆ ಎಂದರು.

ವಾಜಿಪೇಯಿರವರ ಬಗ್ಗೆ ಸಂಪತ್ ಕುಮಾರ್ ಶಿವಣ್ಣಚಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಗ್ರಾಮಾಂತರ ಘಟಕದ ಅಧ್ಯಕ್ಷ ಕಲ್ಲೇಶಯ್ಯ, ಕಾರ್ಯದರ್ಶಿ ಮೋಹನ್, ವಕ್ತಾರರಾದ ದಗ್ಗೆ ಶಿವಪ್ರಕಾಶ್, ಕಿರಣ್ ಕುಮಾರ್, ಭರತ್, ಸಂಜು, ಅರುಣಾ ಪರಶುರಾಮ್, ವಿರೂಪಾಕ್ಷಿ, ತಿಮ್ಮಣ್ಣ, ಅನೂಪ್ ಮಹಾಂತೇಶ್, ಪಾಪಣ್ಣ ಸೇರಿದಂತೆ ಇತರರು ಭಾಗವಹಿಸಿದ್ದರು ವಕ್ತಾರರಾದ ನಾಗರಾಜ್ ಬೇದ್ರೇ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ತಿಪ್ಪೇಸ್ವಾಮಿ ವಂದಿಸಿದರು.

ಫಾಸ್ಟ್ ನ್ಯೂಸ್

ಹೂಳೆತ್ತುವ ಕಾರ್ಯಕ್ಕೆ ಗರಗದ ಕೆರೆ ಹಸ್ತಾಂತರ

» ಹೊಸದುರ್ಗ

ಜನ ಜಾನುವಾರುಗಳಿಗೆ ಅನುಕೂಲವಾಗಲೆಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಕೆರೆ ಹೂಳೆತ್ತುವ ಕಾರ್ಯಕ್ರಮ ಮಾಡುತ್ತಿದ್ದೇವೆ ಎಂದು ಪ್ರಾದೇಶಿಕ ನಿರ್ದೇಶಕಿ ಗೀತಾ ತಿಳಿಸಿದರು. ತಾಲೂಕಿನ ಶ್ರೀರಾಂಪುರ ಹೋಬಳಿ ಗರಗದ ದ್ಯಾವಜ್ಜನ ಪಾಳ್ಯದ ಗೌಡನಕಟ್ಟೆ ಕೆರೆಯನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಹಸ್ತಾಂತರ ಮತ್ತು ಹೂಳೆತ್ತುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಒಟ್ಟು 1200000/– ರೂ ಗಳಷ್ಟು ಊರಿನ ಸಹಭಾಗಿತ್ವದಲ್ಲಿ ಖರ್ಚು ಮಾಡಿ ಹೂಳೆತ್ತುವ ಕಾರ್ಯಕ್ರಮವನ್ನು ಮಾಡಿ ಈ ದಿನ ಗ್ರಾಮಪಂಚಾಯಿತಿಗೆ ಹಸ್ತಾಂತರ ಮಾಡುತ್ತಿದ್ದೇವೆ ಇದರ ಉಪಯೋಗವನ್ನು ಜನ ಜಾನುವಾರು ಪ್ರಾಣಿ ಪಕ್ಷಿಗಳು ಮತ್ತು ಕುಡಿಯಲು ಯೋಗ್ಯವಾದ ಶುದ್ಧನೀರನ್ನೇ ಬಳಸಬೇಕು, ಕೆರೆಯ ಸುತ್ತಮುತ್ತ ಸ್ವಚ್ಛವಾಗಿಡಬೇಕು ಎಂದು ಕರೆ ನೀಡಿದರು.

ಈ ಸಂಧರ್ಬದಲ್ಲಿ ಗ್ರಾಮಪಂಚಾಯ್ತಿ ಅಧ್ಯಕ್ಷೆ ಶ್ರೀಮತಿ ಶಂಕರಮ್ಮ ,ಕೆರೆ ಸಮಿತಿಯ ಅಧ್ಯಕ್ಷ ಶಿವಣ್ಣ ಆರ್. ಸಮಾಜ ಸೇವಕ ಅರುಣ್‌ಕುಮಾರ್ ಗೋವಿಂದಪ್ಪ.ಸುವರ್ಣ ಜಿಲ್ಲಾ ನಿರ್ದೇಶಕ ವಿನಯ್ ಕುಮಾರ್, ಶಿವಣ್ಣ ವಲಯ ಮೇಲ್ವಿಚಾರಕಿ ಭವ್ಯ, ಮೇಲ್ವಿಚಾರಕ ಚೇತನ್ ಕುಮಾರ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಗ್ರಾಮದ ಗ್ರಾಮದೇವತೆಗೆ ಪೂಜೆ ಸಲ್ಲಿಸಿ ಗಂಗೆಯನ್ನು ಮೆರವಣಿಗೆ ಮೂಲಕ ಕೆರೆಯ ಸಮೀಪಕ್ಕೆ ತರಲಾಯಿತು.

ಯುವನಿಧಿ ಯೋಜನೆ: ಅರ್ಜಿ ಆಹ್ವಾನಕ್ಕೆ ಚಾಲನೆ

» ಮೊದಲ ಪುಟದಿಂದ

ಯುವನಿಧಿ ಯೋಜನೇಯ ನೋಂದಣಿ ಪ್ರಕ್ರಿಯೆಯು ಡಿ.26 ರಿಂದ ಜಿಲ್ಲೆಯಲ್ಲಿ ಆರಂಭವಾಗಿದೆ. ಸೇವಾಸಿಂಧು ಪೋರ್ಟಲ್ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ಎಸ್.ಎಸ್.ಎಲ್.ಸಿ, ಪಿಯುಸಿ, ಪದವಿ ಹಾಗೂ ಡಿಪ್ಲೋಮಾ ಸೇರಿದಂತೆ ಅಗತ್ಯ ದಾಖಲೆಗಳನ್ನು ಹೊಂದಿರುವ ವಿದ್ಯಾರ್ಥಿಗಳು ಮುಂಚಿತವಾಗಿ ತಾತ್ಕಾಲಿಕ ಪದವಿ ಹಾಗೂ ಡಿಪ್ಲೋಮಾ ಪ್ರಮಾಣ ಪತ್ರ ಪಡೆದು 180 ದಿನಗಳು ಪೂರ್ಣಗೊಳ್ಳುವ ಮುಂಚೆ ಅರ್ಜಿ ಸಲ್ಲಿಸಬೇಕು. ಅಭ್ಯರ್ಥಿಯು ನಿರುದ್ಯೋಗಿ ಎಂದು ದೃಢೀಕರಿಸಬೇಕು ಮತ್ತು ಘೋಷಣೆಯನ್ನು ನೀಡಬೇಕು. ನೋಂದಾಯಿತ ಅಭ್ಯರ್ಥಿ ವಿವರಗಳನ್ನು ಎನ್.ಎ.ಡಿ. ಮೂಲಕ ಪರಿಶೀಲಿಸಲಾಗುವುದು. ಮ್ಯಾನುವೆಲ್ ಮೂಲಕ ಅಪ್ಲೋಡ್ ಮಾಡಿದ ಅಪ್ ಲೋಡ್ ಮಾಡಿದ ಪದವಿ ಹಾಗೂ ಡಿಪ್ಲೋಮಾ ಪ್ರಮಾಣ ಪತ್ರಗಳನ್ನು ಆಯಾ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರಿಗೆ ರವಾನಿಸಲಾಗುವುದು. ತಪ್ಪು ಘೋಷಣೆ ಅಥವಾ ಉದ್ಯೋಗ ಪಡೆದಿರುವುದನ್ನು ಘೋಷಿಸಲು ವಿಫಲವಾದರೆ ದಂಡ ವಿಧಿಸಲಾಗುತ್ತದೆ. ಪಾವತಿಸಿದ ಮೊತ್ತವನ್ನು ಕಾನೂನಿನ ಪ್ರಕಾರ ವಸೂಲಿ ಮಾಡಲಾಗುವುದು. ಯುವನಿಧಿ ಯೋಜನೆಯಡಿ ನೋಂದಾಯಿತ ಅಭ್ಯರ್ಥಿಗಳ ದತ್ತಾಂಶವನ್ನು ಪರಿಶೀಲನೆಗಾಗಿ ಕೌಶಲ್ಯ ಸಂಪರ್ಕ ಪೋರ್ಟ್‌ಲ್‌ಗೆ ಲಭ್ಯವಿರುವ ದತ್ತಾಂಶದೊಂದಿಗೆ ವರ್ಗಾಯಿಸಲಾಗುವುದು. ಅಭ್ಯರ್ಥಿಯು ನಿರುದ್ಯೋಗಿ ಯಾಗಿರುವುದನ್ನು ನಿಗದಿತ ನಮೂನೆಯಲ್ಲಿ ಪ್ರತಿ ತಿಂಗಳ 25 ನೇ ತಾರೀಖು ಅಥವಾ ಅದಕ್ಕಿಂತ ಮೊದಲು ಆಧಾರ್ ಆಧಾರಿತ ಓ.ಟಿ.ಪಿ ಮೂಲಕ ಘೋಷಣೆ ಮಾಡತಕ್ಕದ್ದು. ಉದ್ಯೋಗ ದೊರಕಿದ ನಂತರ ಅಭ್ಯರ್ಥಿಯು ತಕ್ಷಣವೇ ಮುಚ್ಚಳಿಕೆ ಪತ್ರ ನೀಡಬೇಕು. ಜಿಲ್ಲೆಯ ಎಲ್ಲಾ ಅರ್ಹ ಅಭ್ಯರ್ಥಿಗಳು ಯೋಜನೆಯ ಲಾಭ ಪಡೆದುಕೊಳ್ಳುವಂತೆ ಜಿಲ್ಲಾಧಿಕಾರಿ ಜಿ.ಆರ್. ಜೆ ದಿವ್ಯಪ್ರಭು ಕೋರಿದ್ದಾರೆ.

ದತ್ತಮಾಲಾಧಾರಿಗಳಿಂದ ಸಂಕೀರ್ತನ ಯಾತ್ರೆ

» ಮೊದಲ ಪುಟದಿಂದ

ದಕ್ಷಿಣ ಭಾರತದ ಹಿಂದೂಗಳ ಶ್ರದ್ಧಾ ಕೇಂದ್ರ ಚಂದ್ರದ್ರೋಣಪರ್ವತದ ಮೇಲಿರುವ ಜಗದ್ಗುರು ಶ್ರೀ ದತ್ತಾತ್ರೇಯ ಮಹಾಸ್ವಾಮಿಗಳವರ ದತ್ತ ಪಾದುಕೆ ದರ್ಶನ ಮಾಡಲು ಮಾಲಾಧಾರಣೆ ಮಾಡಿದರು. ಸಂಜೆ ಮಾಲಾಧಾರಣೆಯಾದ ಬಳಿಕ ಪಟ್ಟಣದ ಮುಖ್ಯರಸ್ತೆಯಲ್ಲಿ ಶೋಭಾಯಾತ್ರೆಯಲ್ಲಿ ಸಾಗಿ, ಗಾಂಧಿ ಸರ್ಕಲ್, ಗಣಪತಿ ದೇವಸ್ಥಾನ, ದುರ್ಗಾಂಭಿಕಾ ದೇವಸ್ಥಾನದ ಮುಖಾಂತರ ಶೋಭಾ ಯಾತ್ರೆಸಾಗಿ ಕೋಟೆ ಬಡಾವಣೆಯ ಶ್ರೀ ರಾಮ ಮಂದಿರ ತಲುಪಿತು. ಅಲ್ಲಿ ವಿಶೇಷ ಪೂಜೆ ಸಲ್ಲಿಸಿ, ಬಂಡೆ ಮಾರ್ಕೆಟ್ ಹಾಗೂ ಎರಡನೇ ಮುಖ್ಯ ರಸ್ತೆಯಲ್ಲಿ ದತ್ತಭಿಕ್ಷೆ ಪಡೆದರು.

ತಾಯಂದಿರು ಶ್ರೀ ಗುರು ದತ್ತಾತ್ರೇಯ ಭಾವಚಿತ್ರಕ್ಕೆ ನಮಿಸಿ ಪೂಜೆ ನೆರವೇರಿಸಿ ಭಕ್ತಿ ಮೆರೆದರು. ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಮಾಲಾಧಾರಿಗಳು ಶ್ರೀ ಸ್ವಾಮಿಗೆ ಪೂಜೆ ಸಲ್ಲಿಸಿ ಶ್ರೀ ಬನಶಂಕರಿ ಸಮುದಾಯ ಭವನದಲ್ಲಿ ರಾತ್ರಿ ದತ್ತ ಜಯಂತಿ ಪ್ರಯುಕ್ತ ವಿಶೇಷ ಭಜನೆ ಕಾರ್ಯಕ್ರಮ ನೆರವೇರಿಸಿದರು. ಮಂಗಳವಾರ ಮುಂಜಾನೆ ಮಾಲಾಧಾರಿಗಳು ಶ್ರೀ ದತ್ತ ಪೀಠಕ್ಕೆ ತೆರಳಿ ದರ್ಶನ ಪಡೆದು ರಾತ್ರಿ ತಮ್ಮ ಗ್ರಾಮಗಳಿಗೆ ಹಿಂದಿರುಗಿದರು.

ದತ್ತಮಾಲ ಅಭಿಯಾನ ಕಾರ್ಯಕ್ರಮದಲ್ಲಿ ವಿಶ್ವ ಹಿಂದೂ ಪರಿಷತ್ ಅಧ್ಯಕ್ಷ ಶ್ರೀನಿವಾಸ್ ಮೂರ್ತಿ, ಮುಖಂಡ ಗೂಳಿಹಟ್ಟಿ ಕೃಷ್ಣಮೂರ್ತಿ, ಸಮಾಜ ಸೇವಕ ದಿಲ್ಸೇ ದಿಲೀಪ್, ತುಂಬಿನಕೆರೆ ಬಸವರಾಜ್ , ರವಿಕಿರಣ್ ಪಾಟೀಲ್, ರಾಜಪ್ಪ, ಯೋಗೀಶ್,ಸಿದ್ದೇಶ್, ಅರುಣ್, ಮಂಜುನಾಥ್, ನಾಗರಾಜ್, ಪ್ರಸನ್ನ, ಜಯಸೂರ್ಯ, ರಮೇಶ್ ಮತ್ತು ವಿಶ್ವ ಹಿಂದೂ ಪರಿಷತ್ ಬಜರಂಗದಳದ ಕಾರ್ಯಕರ್ತರು ಭಾಗವಹಿಸಿದ್ದರು.

ಅಜ್ಞಾನ, ಆಹಂಕಾರವಿರುವ ವ್ಯಕ್ತಿ ದೈವತ್ವವನ್ನು ಪಡೆಯಲು ಸಾಧ್ಯವಾಗದು: ಚೈತನ್ಯಮಯಿ

» ಚಳ್ಳಕೆರೆ

ಅಜ್ಞಾನ, ಆಹಂಕಾರ ಯಾವ ವ್ಯಕ್ತಿಯಲ್ಲಿರುತ್ತದೆಯೋ ಅವನನ್ನು ಸಮಾಜಮುಖಿಯಾಗಿ ಗುರುತಿಸಲು ಸಾಧ್ಯವಿಲ್ಲ. ಸಮಾಜದಲ್ಲಿ ಉತ್ತಮ ಕಾರ್ಯ ನಡೆಯಬೇಕಾದಲ್ಲಿ ತಮ್ಮದೇಯಾದ ಪುಣ್ಯ ಕಾರ್ಯಗಳಿಂದ ದೈವತ್ವವನ್ನು ಪಡೆಯಬೇಕು. ಭಾರತದ ಸನಾತನ ಹಿಂದೂಧರ್ಮ ಹಾಗೂ ಈ ನೆಲೆದಲ್ಲಿರುವ ಎಲ್ಲಾ ಧರ್ಮಶಕ್ತಿಗಳು ಸಮಾಜದ ಏಳಿಗಾಗಿ ಕಾರ್ಯನಿರ್ವಹಿಸಿವೆ ಎಂದು ಹಿರಿಯೂರು ಶಾರದಾಶ್ರಮದ ಮಾತಾಜಿ ಚೈತನ್ಯಮಯಿ ತಿಳಿಸಿದರು.

ಅವರು, ಸೋಮವಾರ ಇಲ್ಲಿನ ಶಾರದಾಶ್ರಮದಲ್ಲಿ ಮಾತೆತ್ಯಾಗಮಯಿ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಜೀವನಗಂಗಾ ಪರೀಕ್ಷೆ ವಿಜೇತರಿಗೆ ಬಹುಮಾನ ವಿತರಣೆ ಹಾಗೂ ಶಾರದಾದೇವಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಇಂದು ಸಮಾಜದಲ್ಲಿ ಭಕ್ತಿ, ಶ್ರದ್ಧೆ ಹಾಗೂ ದೇವರ ಬಗ್ಗೆ ಇರುವ ಕಳಕಳಿ ಕಡಿಮೆಯಾಗುತ್ತಾ ಬಂದಿದೆ. ಇದಕ್ಕೆ ಕಾರಣ ನಾವು ಸರಿಯಾದ ದಾರಿಯಲ್ಲಿ ಹೆಜ್ಜೆ ಇಡದೇ ಇರುವುದು. ಆಧ್ಯಾತ್ಮಿಕ ಚಿಂತನೆ ಮತ್ತು ಧಾರ್ಮಿಕ ಕಾರ್ಯಕ್ರಮಗಳಿಂದ ನಾವು ಹೊಸ ಸಮಾಜವನ್ನು ಕಟ್ಟುವ ಕಾರ್ಯಕ್ಕೆ ಮುಂದಾಗಬೇಕು ಎಂದರು.

ಚಳ್ಳಕೆರೆ ನಗರದ ಶಾರದಾಶ್ರಮದಲ್ಲಿ ಮಾತೆತ್ಯಾಗಮಯಿ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಶಾರದಾದೇವಿ ಜಯಂತಿ ಹಾಗೂ ಜೀವನಗಂಗಾ ಪರೀಕ್ಷೆ ವಿಜೇತರಿಗೆ ಬಹುಮಾನ ವಿತರಣೆದಲ್ಲಿ ಲೋಕಕಲ್ಯಾಣಕ್ಕಾಗಿ ಹೋಮ ನಡೆಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾರದಾಶ್ರಮದ ಮಾತೆ ತ್ಯಾಗಮಯಿ ಮಾತನಾಡಿ, ಶಾರದಾದೇವಿ ಜಯಂತಿ ಕಾರ್ಯಕ್ರಮಗಳನ್ನು ಪ್ರತಿವರ್ಷ ಆಚರಣೆ ಮಾಡುತ್ತಾ ಬಂದಿದ್ದೇವೆ. ಈ ಸಂದರ್ಭದಲ್ಲಿ ಮಹಿಳೆಯರಿಗೆ ಜೀವನ ಗಂಗ ಪರೀಕ್ಷೆ ನಡೆಸುವ ಮೂಲಕ ಅವರಿಗೆ ಬಹುಮಾನ ನೀಡಿ ಪ್ರೋತ್ಸಾಹಿಸುತ್ತಿದ್ದೇವೆ. ಶಾರದ ಜಯಂತಿ ಎಂದರೆ ಕೇವಲ ಆಟ, ಪಾಠವಲ್ಲ ಬದಲಾಗಿ ನಮ್ಮ ಬುದ್ಧಿ ಶಕ್ತಿಗೆ ಹೆಚ್ಚು ಜ್ಞಾನ ತುಂಬಿಸುವ ಕಾರ್ಯ ಈ ಮೂಲಕ ನಡೆಯುತ್ತದೆ ಎಂದರು.

ಗಾಯಿತ್ರಿ ಕಲ್ಯಾಣ ಮಂಟಪದಲ್ಲಿ ಶಬರಿಮಲೆ ಅಯ್ಯಪ್ಪಸ್ವಾಮಿ ಸೆಟ್

ಸಾವಿರಾರು ಭಕ್ತರಿಂದ ಸ್ವಾಮಿಯ ದರ್ಶನ : ದರ್ಶನಪಡೆದು ಧನ್ಯತೆ ಪಡೆದ ಮಹಿಳೆಯರು

» ಚಳ್ಳಕೆರೆ

ನಗರದ ಗಾಯಿತ್ರಿ ಕಲ್ಯಾಣಮಂಟಪದ ಆವರಣದಲ್ಲಿ ಕಳೆದ ಮೂರು ದಿನಗಳಿಂದ ಇದೇ ಪ್ರಥಮಬಾರಿಗೆ ಶಬರಿಮಲೆ ಶ್ರೀಅಯ್ಯಪ್ಪಸ್ವಾಮಿ ಮಾದರಿಯ ಸೆಟ್ ನಿರ್ಮಿಸಿ ಇಲ್ಲಿನ ಸಾವಿರಾರು ಜನರಿಗೆ ಅಯ್ಯಪ್ಪಸ್ವಾಮಿಯ ದರ್ಶನವನ್ನು ಮಾಡಿಸಿದ ಕೀರ್ತಿ ಹರಿಹರಸುತ ಸೇವಾಸಮಿತಿಯವರದ್ದು. ಮೂರನೇ ವರ್ಷದ ಅಯ್ಯಪ್ಪಸ್ವಾಮಿ ಪೂಜೆ ಮತ್ತು ಪಡಿಪೂಜೆ ಕಾರ್ಯವನ್ನು ಹಮ್ಮಿಕೊಂಡಿದ್ದು, ಪ್ರತಿನಿತ್ಯ ಗಣಹೋಮ, ಉಷಾಪೂಜೆ, ತುಪ್ಪಾಭಿಷೇಕ, ಅಷ್ಟಾಭಿಷೇಕ, ಉಯದ ಅಸ್ತಮಾನಪೂಜೆ, ಗೋಪೂಜೆ, ಎತ್ತುಗಳಿಗೆ ಮೇವು ವಿತರಣೆ, ಬಡ ವಿದ್ಯಾರ್ಥಿಗಳಿಗೆ ಉಚಿತ ಶಾಲಾ ಬ್ಯಾಗ್ ವಿತರಣೆಯೂ ಸೇರಿದಂತೆ ಹಲವಾರು ಸಾಮಾಜಿಕ ಚಟುವಟಿಕೆಗಳನ್ನು ಸಹ ಈ ಕಾರ್ಯಕ್ರಮದಲ್ಲಿ ಹಮ್ಮಿಕೊಳ್ಳಲಾಗಿತ್ತು. ಚಳ್ಳಕೆರೆ ನಗರದಲ್ಲಿ ದಶಮಾನಗಳ ಕಾಲ ಶ್ರೀಅಯ್ಯಪ್ಪಸ್ವಾಮಿಯ ಭಕ್ತರಾಗಿದ್ದ ಗುರುಸ್ವಾಮಿ, ಜಗ್ಗುಸ್ವಾಮಿ(ಏಜೆಂಟ್) ಬಾಸ್‌ಸ್ವಾಮಿ, ರೇಣುಕಾಸ್ವಾಮಿ ಶಿಷ್ಯವೃಂದ ಹರಿಹರಸುತ ಸೇವಾ ಸಮಿತಿ ಹೆಸರಿನಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ನಿರೀಕ್ಷೆಗೂ ಮೀರಿ ಹೆಚ್ಚಿನ ಸಂಖ್ಯೆಯ ಭಕ್ತಸಾಗರ ಸ್ವಾಮಿಯ ದರ್ಶನಕ್ಕಾಗಿ ಹರಿದುಬಂದಿದೆ. ವಿಶೇಷವಾಗಿ ನಗರ ಹಾಗೂ ಗ್ರಾಮೀಣ ಪ್ರದೇಶದ ಮಹಿಳೆಯರೂ ಸಹ ಆಗಮಿಸಿ ಭಯಭಕ್ತಿಯಿಂದ ಸ್ವಾಮಿಗೆ ನಮಿಸಿದರಲ್ಲದೆ, ಅಯ್ಯಪ್ಪಸ್ವಾಮಿಯ ದರ್ಶನ ಇಲ್ಲಿಯೇ ನಮಗೆ ಪ್ರಾಪ್ತಿಯಾತು ಎಂಬುವ ಧನ್ಯತೆಯನ್ನು ವ್ಯಕ್ತಪಡಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ ಸಹ ಭೇಟಿ ನೀಡಿ, ಚಳ್ಳಕೆರೆ ನಗರದಲ್ಲಿ ಶ್ರೀಅಯ್ಯಪ್ಪಸ್ವಾಮಿಯ ದರ್ಶನವನ್ನು ಮಾಡಿಸಲು ವ್ಯವಸ್ಥೆ ಕೈಗೊಂಡ ಅಯ್ಯಪ್ಪಸ್ವಾಮಿಯ ಎಲ್ಲಾ ಭಕ್ತರ ಉದ್ದೇಶವನ್ನು ಕೊಂಡಾಡಿದರು. ಈ ಸಂದಭದಲ್ಲಿ ಮಾತನಾಡಿದ ಅವರು, ಯಾವುದೆ ವ್ಯಕ್ತಿ ಭಯ, ಭಕ್ತಿ, ನಮ್ರತೆ, ನಂಬಿಕೆಯಿಂದ ಪೂಜೆಯನ್ನು ಮಾಡಿದರೆ ಅಂತಹ ವ್ಯಕ್ತಿಗೆ ಗುರುವಿನ ಅನುಗ್ರಹವಾಗುತ್ತದೆ. ಅಯ್ಯಪ್ಪಸ್ವಾಮಿಯ ಸಾವಿರಾರು ಭಕ್ತರು ಈ ಕಾರ್ಯಕ್ರಮದಲ್ಲಿ ಪಾಲ್ಗೊ

ಫಾಸ್ಟ್ ನ್ಯೂಸ್

ಯುವಕರು ಕೃಷಿಯ ಕಡೆ ಒಲವು ಕೊಡಬೇಕು

» ಹೊಸದುರ್ಗ

ಇತ್ತೀಚಿನ ದಿನಗಳಲ್ಲಿ ಸಿರಿಧಾನ್ಯಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತಿದ್ದು, ಅದರಲ್ಲೂ ಹೊಸದುರ್ಗ ತಾಲೂಕಿನಲ್ಲಿ ಹೆಚ್ಚಿನದಾಗಿ ಬೆಳೆಯುತ್ತಿದ್ದಾರೆ, ಸಿರಿಧಾನ್ಯಗಳನ್ನು ಹೆಚ್ಚಾಗಿ ಬಳಸಬೇಕು ಹಾಗೂ ಯುವಕರು ಕೃಷಿಯ ಕಡೆ ಒಲವು ಕೊಡಬೇಕು ಎಂದು ಸಮಾಜ ಸೇವಕ ಅರುಣ್.ಬಿ.ಜಿ ಕರೆ ನೀಡಿದರು. ಪಟ್ಟಣದ ಕೃಷಿ ಇಲಾಖೆಯಲ್ಲಿ ಕೃಷಿ ಇಲಾಖೆ ಹಾಗೂ ತಾಲ್ಲೂಕು ಕೃಷಿಕ ಸಮಾಜ ಹೊಸದುರ್ಗ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಲಾಗಿದ್ದ 2023–24ನೇ ಸಾಲಿನ ಆತ್ಮ ಯೋಜನೆಯಡಿ ರಾಷ್ಟ್ರೀಯ ರೈತರ ದಿನದ ಅಂಗವಾಗಿ ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ಯಮಿಗಳ ಔಪಚಾರಿಕರ ಬಗ್ಗೆ ಕಿಸಾನ್ ಗೋಷ್ಠಿ ಕಾರ್ಯಕ್ರಮವನ್ನ ಉದ್ಘಾಟಿಸಿ ಮಾತನಾಡಿದರು.ಪ್ರಾಸ್ತಾವಿಕವಾಗಿ ಮಾತನಾಡಿದ ಸಹಾಯಕ ಕೃಷಿ ನಿರ್ದೇಶಕ ಸಿ.ಎಸ್.ಈಶ ರೈತ ದೇಶದ ಬೆನ್ನೆಲುಬು, ಭಾರತದ 5ನೇ ಪ್ರಧಾನಮಂತ್ರಿಗಳಾದ ಶ್ರೀ ದಿ.ಚೌದರಿ ಚರಣ್ ಸಿಂಗ್ ಇವರು ರೈತರ ಏಳಿಗೆಗಾಗಿ ಹಾಗೂ ರೈತರ ಆದಾಯ ಸ್ಥಿರವಾಗಿರಬೇಕೆಂದು ಶ್ರಮಿಸಿದ ಸ್ಮರಣರ್ಥವಾಗಿ ಇವರ ಹುಟ್ಟು ದಿನವನ್ನು ರಾಷ್ಟ್ರೀಯ ರೈತರ ದಿನವನ್ನಾಗಿ ಆಚರಿಸಲಾಗುತ್ತಿದೆ ಎಂದು ತಿಳಿಸಿದರು. ಮತ್ತು ಕೃಷಿ ಭಾಗ್ಯ ಯೋಜನೆ, ಕೃಷಿ ಯಾಂತ್ರೀಕರಣ, ಸೂಕ್ಷ್ಮ ನೀರಾವರಿ ಘಟಕಕ್ಕೆ ಅರ್ಜಿ ಸಲ್ಲಿಸುವಂತೆ ರೈತರಿಗೆ ತಿಳಿಸಿದ ಅವರು ಪಿ.ಎಂ.ಕಿಸಾನ್ ಈ–ಕೆವೈಸಿ ಮತ್ತು ರೈತರು ತಮ್ಮ ಎಲ್ಲಾ ಪಹಣಿಗಳನ್ನು ಪ್ರೂಟ್ಸ್ ತಂತ್ರಾಂಶದಲ್ಲಿ ನೋಂದಾಯಿಸಿಕೊಳ್ಳಲು ತಿಳಿಸಿದರು.ಪಿ.ಎಂ. ಎಫ್.ಎಂ.ಇ ಸಿಇಒ ಶ್ರೀಮತಿ ಡಾ.ಶಶಿಕಲಾ ಬಾಯಿ ಪಿಎಂಎಫ್ಎಂಎಫ್ ಜಿಲ್ಲಾ ಸಂಪನ್ಮೂಲ ವ್ಯಕ್ತಿ ಮೋಹನ್ ಕುಮಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ರೈತ ಮುಖಂಡ ಮಹೇಶ್ವರಪ್ಪ, ಕೃಷಿಕ ಸಮಾಜದ ಅಧ್ಯಕ್ಷ ಕೆ.ಬಿ.ಚಂದ್ರಶೇಖರಪ್ಪ ಆತ್ಮ ಯೋಜನೆಯ ಸಿಬ್ಬಂದಿಗಳಾದ ನಟರಾಜ್, ತುಳಸಿರಾಮು, ಲೋಹಿತ್, ಕವಿತಾ, ಕೃಷಿ ಸಂಜೀವಿನಿ ತಾಂತ್ರಿಕ ಸಹಾಯಕ ಸಂತೋಷ್.ಎ.ಎನ್, ದುರ್ಗದ ಸಿರಿಧಾನ್ಯ ಕಂಪನಿ ಕಾರ್ಯನಿರ್ವಹಣಾಧಿಕಾರಿ ಬಿ. ಜಿ ಗಿರೀಶ್ ಸೇರಿದಂತೆ ನಿರ್ದೇಶಕರು ಹಾಗೂ ಸದಸ್ಯರುಗಳು, ಕೃಷಿ ಇಲಾಖೆಯ ಹಾಗೂ ಕೃಷಿ ಇಲಾಖೆಯ ಸಿಬ್ಬಂದಿವರ್ಗದವರು ಹಾಜರಿದ್ದರು.

ರಾಮಾನುಜನ್ ಚಿಕ್ಕವಯಸ್ಸಿನಲ್ಲೆ ಗಣಿತದಲ್ಲಿ ಆಸಕ್ತಿ ಇಟ್ಟುಕೊಂಡಿದ್ದರು

» ಹೊಸದುರ್ಗ

ರಾಮಾನುಜನ್ ಚಿಕ್ಕ ವಯಸ್ಸಿನಲ್ಲಿಯಲ್ಲೇ ಗಣಿತದ ಬಗ್ಗೆ ಅಪಾರ ಆಸಕ್ತಿಯನ್ನು ಇಟ್ಟುಕೊಂಡಿದ್ದರಿಂದ ಮುಂದೆ ಪ್ರಖ್ಯಾತ ಗಣಿತ ಪಂಡಿತರಾಗಿ ಜಗತ್ತಿನ ಗಮನ ಸೆಳೆಯುವಂತಾಯಿತು ಎಂದು ಮುಖ್ಯ ಶಿಕ್ಷಕ ಎ.ಎನ್ ಕಿರಣ್ ಕುಮಾರ್ ತಿಳಿಸಿದರು. ಪಟ್ಟಣದ ಶ್ರೀ ತೋಟದ ರಾಮಯ್ಯ ಗೌರಮ್ಮ ಬಾಲಿಕಾ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಗಣಿತ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶ್ರೀನಿವಾಸ ರಾಮಾನುಜನ್ ಅವರ ಜನ್ಮದಿನದ ಅಂಗವಾಗಿ ಪ್ರತಿವರ್ಷ ರಾಷ್ಟ್ರೀಯ ಗಣಿತ ದಿನಾಚರಣೆಯನ್ನು ಆಚರಿಸಲಾಗುತ್ತದೆ ಎಂದು ತಿಳಿಸಿದರು ಗಣಿತ ಶಿಕ್ಷಕರಾದ ಬಿ ಮಧು ಮಾತನಾಡಿ ರಾಮಾನುಜನ್ ಗಣಿತಕ್ಕೆ ಅಮೋಘವಾದ ಕೊಡುಗೆಯನ್ನು ನೀಡಿದ ಪ್ರತಿಭಾವಂತ. ಕಬ್ಬಿಣದ ಕಡಲೆ ಎಂದು ಪರಿಭಾವಿಸುತ್ತಿರುವ ಈ ದಿನಗಳಲ್ಲಿ ಅವರನ್ನು ಸ್ಮರಿಸುವ ಮೂಲಕ ಗಣಿತಶಾಸ್ತ್ರವನ್ನು ಪ್ರೋತ್ಸಾಹಿಸುವ ಅವಶ್ಯಕತೆ ಇದೆ ಎಂದು ಹೇಳಿದರು. ವಿದ್ಯಾರ್ಥಿಗಳಾದ ಜಾಹ್ನವಿ, ಪೂಜಾ ಇವರು ರಾಮಾನುಜನ್ ಅವರನ್ನು ಕುರಿತು ಮಾತನಾಡಿದರು. ಶ್ರೇಯಾ ಸಂಗಡಿಗರು ಪ್ರಾರ್ಥಿಸಿದರು. ಕಾರ್ಯಕ್ರಮದಲ್ಲಿ ಶಿಕ್ಷಕರಾದ ಜಿ ಎಸ್ ಗಿರಿಜಾಶಂಕರ್, ಕೆ ಬಿ ಸವಿತ, ಹೆಚ್ ಎಸ್ ಅಶೋಕ್, ಎಸ್ ರೇಖಾ, ರಂಗನಾಥ್ , ಸಿ ವೀಣಾ, ದೀಪಾ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ರಾಮಾನುಜನ್ ಅವರ ಜನ್ಮದಿನದ ನೆನಪಿಗಾಗಿ ಮಕ್ಕಳಿಗೆ ಕ್ವಿಜ್ ಕಾರ್ಯಕ್ರಮವನ್ನು ನಡೆಸಲಾಯಿತು. ಶ್ರೀನಿವಾಸ ರಾಮಾನುಜನ್ ತಂಡದ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದರು.

ರೈತರಿಗೆ ತರಬೇತಿ

» ಚಿತ್ರದುರ್ಗ

ಹಿರಿಯೂರು ತಾಲ್ಲೂಕು ಬಬ್ಬೂರು ಫಾರಂ ನಲ್ಲಿರುವ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಜಿಲ್ಲೆಯ ರೈತರಿಗೆ "ಲಾಭದಾಯಕ ಹೈನುಗಾರಿಕೆ" ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಡಿ. 28 ರಂದು ಬೆಳಗ್ಗೆ 10 ಗಂಟೆಗೆ ಹಮ್ಮಿಕೊಂಡಿದ್ದು ಆಸಕ್ತ ರೈತರು ಭಾಗವಹಿಸಬಹುದಾಗಿದೆ.

ಎರಡು ಕಡೆ ಅರ್ಜುನ ಸ್ಮಾರಕ: ಈಶ್ವರ ಖಂಡ್ರೆ



» ಚಿತ್ರದುರ್ಗ

ಎಂಟು ಬಾರಿ ಅಂಬಾರಿಯನ್ನು ಹೊತ್ತ ಆನೆ ಅರ್ಜನ್ ಅದು ಮರಣ ಹೊಂದಿದ ಮತ್ತು ವಾಸ ಮಾಡುತ್ತಿದ್ದ ಎರಡು ಕಡೆಗಳಲ್ಲಿಯೂ ಅದರ ಸ್ಮಾರಕವನ್ನು ನಿರ್ಮಾಣ ಮಾಡಲಾಗುವುದೆಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಕಳೆದ 20 ರಿಂದ ನಗರದ ಹಳೇ ಮಾಧ್ಯಮಿಕ ಶಾಲಾ ಆವರಣದಲ್ಲಿ ನಡೆಯುತ್ತಿರುವ ದುರ್ಗಾ ಇಲೆವೆನ್ ಕ್ರಿಕೇಟರ್ಸ್‌ವತಿಯಿಂದ ಸತತವಾಗಿ 8 ಬಾರಿ ದಸರಾ ಅಂಬಾರಿಯನ್ನು ಹೊತ್ತ ಆನೆ ಅರ್ಜನನ ಸ್ಮರಣಾರ್ಥ ಅರ್ಜುನ್ ಕಪ್–2023ರ ರಾಜ್ಯ ಮಟ್ಟದ ಟೆನಿಸ್‌ಬಾಲ್ ಹೊನಲು ಬೆಳಕಿನ ಕ್ರಿಕೆಟ್ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಮಾನವ ಪ್ರಾಣಿಗಳ ಸಂಘರ್ಷ ಇಂದು ನೆನೆಯದ್ದಲ್ಲ ಹಲವಾರು ವರ್ಷಗಳಿಂದ ನಡೆಯತ್ತಾ ಬಂದಿದೆ. ಪ್ರಕೃತಿ ಪರಿಸರ, ಅರಣ್ಯ ಎಲ್ಲವನ್ನು ಸಂರಕ್ಷಣೆ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ. ಪರಿಸರ ಇದ್ದರೆ ಮಾತ್ರ ನಾವು ಇರಲು ಸಾಧ್ಯವಿದೆ ಇಲ್ಲದಿದ್ದರೆ ನಾವು ಯಾರು ಇಲ್ಲ ಇದು ನಡೆಯಬೇಕಾದರೆ ವನ್ಯ ಜೀವಿಗಳ ಸಮನ್ವಯವನ್ನು ಕಾಪಾಡಬೇಕಿದೆ. ಪ್ರಾಣಿಗಳು ಮಾನವ ಬದುಕಿನಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತೇವೆ. ನಮ್ಮಲ್ಲಿ 1975ರಿಂದ ವನ್ಯ ಜೀವಿ ಕಾಯ್ದೆ ಇದೆ. ಇದನ್ನು ಸಂರಕ್ಷಿಸುವ ಅಗತ್ಯ ಇದೆ ನಮ್ಮಲ್ಲಿ ಉತ್ತಮವಾದ ಅರಣ್ಯ ಇದೆ ನಮ್ಮಲ್ಲಿನ ಕಾಡಿನಲ್ಲಿ ಹಲವಾರು ಪ್ರಾಣಿಗಳು ಇವೆ. ಆನೆ, ಹುಲಿ, ಚಿರತೆಗಳಿವೆ 6395 ಆನೆಗಳು ನಮ್ಮ ರಾಜ್ಯದಲ್ಲಿ ಆನೆಗಳಿವೆ ದೇಶದಲ್ಲಿ ಅತಿ ಹೆಚ್ಚು ಆನೆಗಳಿವೆ ಎಂಬ ಹೆಗ್ಗಳಿಕೆಗೆ ರಾಜ್ಯ ಪಾತ್ರವಾಗಿದೆ. ಹುಲಿ ಸಂಖ್ಯೆಯಲ್ಲಿಯೂ ಸಹಾ ರಾಜ್ಯ ಎರಡನೇ ಸ್ಥಾನದಲ್ಲಿದೆ. ರಾಜ್ಯದಲ್ಲಿ 563 ಹುಲಿಗಳಿವೆ ಎಂದರು.

ಆನೆ ಕಾರ್ಯಾಚರಣೆ ಅತಿ ಆಪಾಯಕಾರಿಯಾಗಿದ್ದು, ಕಷ್ಟವಾಗಿದೆ ಅರಣ್ಯವನ್ನು ಎಲ್ಲರು ವೀಕ್ಷಣೆ ಮಾಡಬೇಕಿದೆ. 8 ಬಾರಿ ಅಂಬಾರಿಯನ್ನು ಹೊತ್ತು ಎಲ್ಲರ ಪ್ರೀತಿಗೆ ಪಾತ್ರವಾದ ಅನೆ ಅರ್ಜನ ಸಂಘರ್ಷದಲ್ಲಿ ಸಾವನ್ನಪ್ಪಿರುವುದು ದುಃಖಕರನಾದ ಸಂಗತಿಯಾಗಿದೆ. ಶ್ರದ್ಧಾಂಜಲಿಯನ್ನು ಅರ್ಪಿಸಬೇಕಿದೆ. ಅರ್ಜನ ಅಂತ್ಯಕ್ರಿಯೇ ಮಾಡಿದ ಸಕಲೇಶಪುರ ಹುಣಸೂರು ಸ್ಥಳದಲ್ಲಿ ಆದರ ಸ್ಮಾರಕವನ್ನು ನಿರ್ಮಾಣ ಮಾಡಲಾಗುವುದು ಇದರ ಬಗ್ಗೆ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ, ಇದ್ದಲ್ಲದೆ ಮೈಸೂರಿನ ಡಿ.ಬಿ. ಕುಪ್ಪೆಯಲ್ಲಿ ಅರ್ಜನ ವಾಸವಾಗಿದ್ದ ಸ್ಥಳದಲ್ಲಿಯೂ ಸಹಾ ಅರ್ಜನನ ಸ್ಮಾರಕವನ್ನು ನಿರ್ಮಾಣ ಮಾಡಲಾಗುವುದು ಎಂದರು.

ಇಂದಿನ ಯುವ ಜನತೆ ಮಾನಸಿಕ ಪ್ರಭುದ್ಧತೆಯ ಜೊತೆಯಲ್ಲಿ ಮತ್ತು ದೈಹಿಕವಾಗಿ ಸದೃಢವಾಗಿರಬೇಕಾದರೆ ಇಂತಹ ಪಂದ್ಯಾವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಿದೆ ಇದರಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಾಗ ಮಾತ್ರ ಉತ್ತಮವಾದ ಶರೀರವನ್ನು ಹೊಂದಲು ಸಾಧ್ಯವಿದೆ. ಸೋಲು–ಗೆಲುವನ್ನು ಕ್ರೀಡಾ ಮನೋಭಾವದಿಂದ ಸ್ವೀಕಾರ ಮಾಡಬೇಕಿದೆ ಸೋತವರು ಕುಗ್ಗದೆ, ಮುಂದಿನ ಪಂದ್ಯಾವಳಿಗೆ ತಯಾರಿಯನ್ನು ಮಾಡಿಕೊಳ್ಳಿ ಅದೇ ರೀತಿ ಗೆದ್ದವರು ಬಿಗದೇ ಇರಬೇಕಿದೆ ಭಾಗವಹಿಸುವುದು ಮುಖ್ಯವಾಗಿದೆ ಎಂದರು.

ಶಾಸಕ ರಘುಮೂರ್ತಿ ಮಾತನಾಡಿ, ಅರ್ಜನ್ ಆನೆಯ ಸ್ಮರಣಾರ್ಥ ಕ್ರಿಕೆಟ್ ಪಂದ್ಯಾವಳಿಯನ್ನು ನಡೆಸುತ್ತಿರುವುದು ಸ್ವಾಗರ್ತಾವಾಗಿದೆ. ಸಾವನ್ನಪ್ಪಿದೆ ಸಕಲೇಶಪುರ ಹುಣಸೂರಿನಲ್ಲಿ ಅಭೀಮಾನಿಗಳ ಶಾಸಕರ ಒತ್ತಡದಿಂದ ಅರ್ಜನ ಆನೆಯ ಅಂತ್ಯಕ್ರಿಯೇಯನ್ನು ಅಲ್ಲಿಯೇ ಮಾಡಲಾಯಿತು. ಮೂಕ ಪ್ರಾಣೀಗಳಿಗೆ ಮಾನವರಾಗಿ ಗೌರವನ್ನು ನೀಡುವುದು ಅಗತ್ಯವಾಗಿದೆ ಇಂದು ಅದರ ಬಗ್ಗೆ ಕ್ರಿಕೆಟ್ ಪಂದ್ಯಾವಳಿಯನ್ನು ಏರ್ಪಡಿಸಿರುವುದು ಸಹಾ ಶ್ಲಾಘನೀಯವಾದದು ಎಂದರು. ಅರ್ಜುನ್ ಆನೆಯ ಮಾವುತರಾದ ವಿನು ಮತ್ತು ರಾಜುರವರನ್ನು ಈ ಸಂದರ್ಭದಲ್ಲಿ ಸಚಿವರು ಸನ್ಮಾನಿಸಿದರು. ಅರ್ಜುನ್ ಕಪ್–2023ರಲ್ಲಿ ಪ್ರಥಮ ಸ್ಥಾನವನ್ನು ಬೆಂಗಳೂರಿನಪ್ರೇಂಡ್ಸ್‌ಕ್ರಿಕೇಟರ್ಸ್‌ಗೆಅರ್ಜುನ ಟ್ರೋಫಿ ಮತ್ತು 2 ಲಕ್ಷ ರೂ, ದ್ವಿತೀಯ ಸ್ಥಾನವನ್ನು ಬೆಂಗಳೂರಿನ ಜನಪ್ರಿಯ ಮೈಟಿ ಕ್ರಿಕೇಟರ್ಸ್‌ಗೆ ಬಲರಾಮ ಟ್ರೋಫಿ ಮತ್ತು 1 ಲಕ್ಷ ರೂ ತೃತೀಯ ಸ್ಥಾನವನ್ನು ಪಡೆದ ಕುಂದಾಪುರದ ಜೌನ್ಸನ ಕ್ರಿಕೇಟರ್ಸ್ ತಂಡಕ್ಕೆ ದ್ರೋಣ ಟ್ರೋಫಿ 50 ಸಾವಿರ ಬಹುಮಾನ ತನ್ನದಾಗಿಸಿಕೊಂಡಿತು. ಉತ್ತಮ ಬ್ಯಾಟ್ಸ್‌ಮೆನ್ ಪ್ರಶಸ್ತಿಯನ್ನು ರಿಯಾಜ್ ಪಡೆದರೆ, ಉತ್ತಮ ಬೋಲರ್ ಪ್ರಶಸ್ತಿಯನ್ನು ಸ್ಯಾಂಡಿ ಪಡೆದಿದ್ದು ಸರಣಿ ಶ್ರೇಷ್ಟ ಪ್ರಶಸ್ತಿಯನ್ನು ಸಾಗರೆ ಭಂಡಾರಿ ಪಡೆದಿದ್ದಾರೆ.

ಮಾಜಿ ಸಂಸದರಾದ ಬಿ.ಎನ್.ಚಂದ್ರಪ್ಪ, ಮಾಜಿ ಸಚಿವರಾದ ಹೆಚ್.ಅಂಜನೇಯ, ನಗರಸಭಾ ಮಾಜಿ ಅಧ್ಯಕ್ಷರಾದ ಸಿ.ಟಿ.ಕೃಷ್ಣಮೂರ್ತಿ, ಮಂಜುನಾಥ್ ಗೊಪ್ಪೆ, ಸುರೇಶ್ ಬಾಬು, ಗೋಪಾಲಸ್ವಾಮಿ ನಾಯಕ್, ವಿನಯ ತಿಮ್ಮಾಪುರ, ನಗರಸಭಾ ಸದಸ್ಯರಾದ ಚಂದ್ರಶೇಖರ್, ಕಾಂಗ್ರೆಸ್ ಮುಖಂಡರಾದ ಮಹಬೂಬ ಪಾಷ, ಬಾಬು, ಕೆ.ಸಿ.ನಾಗರಾಜ್, ನಗರಸಭಾ ಮಾಜಿ ಅಧ್ಯಕ್ಷರು, ಕ್ರಿಕೆಟ್ ಪಂದ್ಯಾವಳಿಯ ಆಯೋಜಕರಲ್ಲಿ ಒಬ್ಬರಾದ ಬಿ.ಕಾಂತರಾಜ್, ಸೇರಿದಂತೆ ಇತರರು ಭಾಗವಹಿಸಿದ್ದರು.

ಉತ್ತಮ ಪ್ರಜೆಗಳನ್ನಾಗಿ ಮಕ್ಕಳನ್ನುರೂಪಿಸಿ

» ಚಿತ್ರದುರ್ಗ

ಶಾಲೆ ಮಕ್ಕಳಿಗೆ ಜ್ಞಾನದ ದೇಗುಲವಿದ್ದಂತೆ. ಇಲ್ಲಿ ಕಲಿಯುವ ಮಕ್ಕಳು ದೇವರಿದ್ದಂತೆ. ಇವರನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವ ಹೊಣೆಗಾರಿಕೆ ಶಿಕ್ಷಕರು ಮತ್ತು ಪೋಷಕರ ಮೇಲಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ದಕ್ಷಿಣ ಕ್ಲಸ್ಟರ್‌ನ ಸಂಪನ್ಮೂಲ ವ್ಯಕ್ತಿ ಶ್ವೇತಾ ತಿಳಿಸಿದರು.

ನಗರದ ತರಾಸು ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದ್ದ ಆಸರ್ ಮೊಹಲ್ಲಾದಲ್ಲಿನ ವಿಕಾಸ ವಿದ್ಯಾ ಸಂಸ್ಥೆಯ 2023–24ನೇ ಸಾಲಿನ ಶಾಲಾ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಶಾಲೆ ಮಕ್ಕಳ ಅಭಿವೃದ್ಧಿಗೆ ಪೂರಕ ವಾತಾವರಣವನ್ನು ನಿರ್ಮಾಣ ಮಾಡಬೇಕಿದೆ. ಇದಕ್ಕೆ ಶಿಕ್ಷಕರು ಮತ್ತು ಪೋಷಕರು ಸಹಾಯವನ್ನು ಮಾಡಬೇಕಿದೆ ಎಂದರು.

ಮಕ್ಕಳು ಸುಸಂಸ್ಕೃತವಾದ ಮತ್ತು ಗ್ರಂಥಿಕ ಭಾಷೆಯನ್ನು ಕಲಿಯಬೇಕಿದೆ. ಇದಲ್ಲದೆ ವೈಜ್ಞಾನಿಕವಾಗಿ ವ್ಯವಹಾರಿಕ ಜ್ಞಾನವನ್ನು ಸಹಾ ನೀಡಬೇಕಿದೆ.

ಶಾಲಾ ಪಠ್ಯದ ಜೊತೆಗೆ ಇತರೆ ಚಟುವಟಿಕೆಗಳನ್ನು ಸಹಾ ಕಲಿಸಬೇಕಿದೆ. ಇದೊಂದು ಜ್ಞಾನದ ದೇಗುಲವಾಗಿ ಮಕ್ಕಳಿಗೆ ಮಾರ್ಪಾಡಾಗಬೇಕಿದೆ ಎಂದು ತಿಳಿಸಿದರು.

ವಿಕಾಸ ವಿದ್ಯಾ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಬಿ.ವಿಜಯಕುಮಾರ್ ಮಾತನಾಡಿ, ನಮ್ಮ ಶಾಲೆಯಲ್ಲಿ ಪ್ರತಿ ವರ್ಷ ಈ ರೀತಿಯಾದ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ ಕರೋನದಿಂದಾಗ ಕಳೆದ ಎರಡು ವರ್ಷ ನಡೆಸಿರಲಿಲ್ಲ, ಮಕ್ಕಳು ಮತ್ತು ಪೋಷಕರು ಉತ್ಸಾಹದಿಂದ ಇಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಶಾಲೆಯಲ್ಲಿ ಶಿಕ್ಷಕರು ಉತ್ತಮವಾ ಭೋದನೆಯನ್ನು ಮಾಡುವುದರ ಮೂಲಕ ಮಕ್ಕಳನ್ನು ದೇಶದ ಮುಂದಿನ ಉತ್ತಮ ಪ್ರಜೆಗಳಾಗಿ ನಿರ್ಮಾಣ ಮಾಡಲಾಗುತ್ತಿದೆ ಎಂದರು.

ಮುಖ್ಯ ಶಿಕ್ಷಕಿ ವಿದ್ಯಾ ಶಾಲಾ ವಾರ್ಷಿಕ ವರದಿಯನ್ನುವಾಚನಮಾಡಿದರು.ಶಿಕ್ಷಕಿಯರಾದ ಲತಾ, ವಸುಂಧರ, ರಶ್ಮಿ ಇದ್ದರು.

ಸಾಣೇಹಳ್ಳಿಯಲ್ಲಿ ಡಿಸೆಂಬರ್ 31 ರಂದು 'ವರ್ಷದ ಹರ್ಷ'

» ಹೊಸದುರ್ಗ

ತಾಲೂಕಿನ ಸಾಣೇಹಳ್ಳಿಯ ಶ್ರೀ ಶಿವಕುಮಾರ ಕಲಾಸಂಘವು ಪ್ರತಿವರ್ಷದಂತೆ ಈ ವರ್ಷವೂ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರ ನೇತೃತ್ವದಲ್ಲಿ 'ವರ್ಷದ ಹರ್ಷ' ಹಾಗೂ 'ವಚನ ಬೆರಗು; ಅರಿವಿನ ಮಾಲಿಕೆ' ಕೃತಿ ಲೋಕಾರ್ಪಣೆ ಕಾರ್ಯಕ್ರಮವನ್ನು ಆಯೋಜಿಸಿದೆ.

ಡಿಸೆಂಬರ್ 31ರ ಸಂಜೆ 6 ಗಂಟೆಯಿಂದ ಆರಂಭವಾಗುವ ಕಾರ್ಯಕ್ರಮದ ಸಾನ್ನಿಧ್ಯವನ್ನು ತಾಲ್ಲೂಕಿನ ಬ್ರಹ್ಮವಿದ್ಯಾನಗರದ ಭಗೀರಥ ಗುರುಪೀಠದ ಶ್ರೀ ಪುರುಷೋತ್ತಮಾನಂದಪುರಿ ಸ್ವಾಮಿಗಳು ವಹಿಸಿಕೊಳ್ಳಲಿದ್ದಾರೆ. ಇಳಕಲ್ಲಿನ ಜಾನಪದ ವಿದ್ವಾಂಸರಾದ ಡಾ. ಶಂಭು ಬಳಿಗಾರ್ ಹಾಗೂ ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಜಿ ಪ್ರಶಾಂತ ನಾಯಕ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಈ ಸಂದರ್ಭದಲ್ಲಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರ ಬಸವ ಪ್ರಜ್ಞೆ, ಲಿಂಗಾಯತ ಮತ್ತು ಬಸವತತ್ವ, ಡಾ. ಪ್ರಶಾಂತ ನಾಯಕರವರ ಬಸವಣ್ಣ ಮತ್ತು ವಚನಗಳು, ಅಕ್ಕಮಹಾದೇವಿ ಮತ್ತು ವಚನಗಳು, ಕುಮಾರ್‌ವರ ಮಾದಾರ ಚೆನ್ನಯ್ಯ, ಉಮಾಶಂಕರ್‌ರವರ ಅಂಬಿಗರ ಚೌಡಯ್ಯ, ಪ್ರತಿಮಾರವರ ಆಯ್ದಕ್ಕಿ ಲಕ್ಕಮ್ಮ, ಚರಣ ಜಂಬಾನಿರವರ ಅಲ್ಲಮಪ್ರಭುದೇವರು, ಅಣ್ಣಪ್ಪ ಎಂ ಮಳೀಮಠರವರ ಮಡಿವಾಳ ಮಾಚಿದೇವರ 'ವಚನ ಬೆರಗು; ಅರಿವಿನ ಮಾಲಿಕೆ' ಎನ್ನುವ ಶರಣರ ಹತ್ತು ಕೃತಿಗಳು ಲೋಕಾರ್ಪಣೆಗೊಳ್ಳಲಿವೆ. ಇದೇ ಸಂದರ್ಭದಲ್ಲಿ ಬೆಂಗಳೂರಿನ ಕಲಾರವ ಲಲಿತ ಅಕಾಡೆಮಿ ತಂಡದ ಸಿದ್ಧರಾಮ ಕೇಸಾಪುರ ಮತ್ತು ತಂಡದವರಿಂದ ಸಂಗೀತ ಸುಧೆ ಕಾರ್ಯಕ್ರಮ ಏರ್ಪಡಿಸಲಾಗಿದೆ.ಸಾಂಸ್ಕೃತಿಕ ಕಾರ್ಯಕ್ರಮಗಳ ನಂತರ ಮೇಲೆ ಸಾಳಂಕಿ ರಚಿಸಿದ, ಮಾಲತೇಶ ಬಡಿಗೇರ ನಿರ್ದೇಶನದಲ್ಲಿ ಶಿವಸಂಚಾರ–23 ರ ತಂಡದವರು 'ತಾಳಿಯ ತಕರಾರು' ಎನ್ನುವ ನಾಟಕವನ್ನು ಪ್ರದರ್ಶನಗೊಳ್ಳಲಿದೆ.

ವಿವಿಧ ಬೇಡಿಕೆಗೆ ಆಗ್ರಹಿಸಿ ಕಟ್ಟಡ ಕಾರ್ಮಿಕರ ಪ್ರತಿಭಟನೆ

» ಮೊದಲ ಪುಟದಿಂದ

ನೋಂದಾಯಿತ ಕಾರ್ಮಿಕ ಸಂಘಟನೆಗಳಿಗೆ ಕಟ್ಟಡ ಕಾರ್ಮಿಕರನ್ನು ನೋಂದಾವಣೆ ಹಾಗೂ ನವೀಕರಣ ಮಾಡಲು ಅನುವುಮಾಡಿಕೊಡಬೇಕು. ಬೋಗಸ್ ನೋಂದಣಿ ರದ್ದತಿಗೆ ಕ್

ಫಾಸ್ಟ್ ನ್ಯೂಸ್

ಉಜ್ಜಯಿನಿ ಮಠದಲ್ಲಿ ಕಡೇ ಕಾರ್ತಿಕ

» ಚಿತ್ರದುರ್ಗ

ನಗರದ ರಂಗಯ್ಯನ ಬಾಗಿಲ ಬಳಿಯಲ್ಲಿನ ಉಜ್ಜಯಿನಿ ಮಠದಲ್ಲಿ ಸೋಮವಾರ ಸಂಜೆ ಶ್ರೀ ಮರುಳಸಿದ್ದೇಶ್ವರ ಶ್ರೀಗಳ ಹಾಗೂ ಶ್ರೀ ಮರುಳಾರಾಧ್ಯ ಶಿವಾಚಾರ್ಯ ಮಹಾ ಭಗವತ್ಪಾದರ ಕತೃ ಗದ್ದುಗೆಯ ಕಡೇ ಕಾರ್ತಿಕ ಮಹೋತ್ಸವ ನಡೆಸಲಾಯಿತು. ಕತೃ ಗದ್ದುಗೆಗೆ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನೆ ಮಹಾ ಮಂಗಳರಾತಿ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಭಕ್ತಾಧಿಗಳು ದೀಪವನ್ನು ಹಚ್ಚುವುದರ ಮೂಲಕ ಕಾರ್ತೀಕ ಮಹೋತ್ಸವನ್ನು ನಡೆಸಿಕೊಟ್ಟರು, ನಂತರ ಪ್ರಸಾದ ವ್ಯವಸ್ಥೆಯನ್ನು ಮಾಡಲಾಗಿತ್ತು. ಈ ಸಂದರ್ಭದಲ್ಲಿ ಮಳೆ ಮಲ್ಲಿಕಾರ್ಜನ ಶ್ರೀಗಳು, ಶ್ರೀ ಮಠದ ಉತ್ತರಾಧಿಗಳಾದ ಅಬೀಷೇಕ ದೇವರು ಉಜ್ಜಯಿನಿ ಮಠದ ಕಾರ್ಯದರ್ಶಿಗಳಾದ ಯು.ಎಂ.ಆರ್. ಈಶ್ವರ ಪ್ರಸಾದ್, ಹಾಗೂ ಮನೋಜ್ ಸೇರಿದಂತೆ ಭಕ್ತಾಧಿಗಳು ಭಾಗವಹಿಸಿದ್ದರು.

ಗ್ರಾಮೀಣ ಭಾಗದ ಜನರಿಗೆ ಸಾರಿಗೆ ಸೌಲಭ್ಯ ಕೊರತೆ-ಆಗದಂತೆ ಕ್ರಮ: ಶಾಸಕ ಟಿ.ರಘುಮೂರ್ತಿ

» ಚಳ್ಳಕೆರೆ

ಚಳ್ಳಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣಭಾಗದ ಪ್ರದೇಶಗಳಿಗೆ ಹೆಚ್ಚಿನ ಬಸ್ ಸೌಕರ್ಯವನ್ನು ಕಲ್ಪಿಸಲು ಹೆಚ್ಚುವರಿಯಾಗಿ ಬಸ್‌ಗಳನ್ನು ನೀಡುವಂತೆ ಸಾರಿಗೆ ಸಚಿವರಿಗೆ ಮನವಿ ಮಾಡಿದ್ದು, ಇನ್ನೊಂದೆರಡು ತಿಂಗಳಲ್ಲಿ ಅವಶ್ಯವಿರುವ ಬಸ್‌ಗಳ ಸೇವೆಯನ್ನು ಆರಂಭಿಸಲು ಚಿಂತನೆನಡೆಸಿದೆ ಎಂದು ಶಾಸಕ ರಘುಮೂರ್ತಿ ತಿಳಿಸಿದರು. ಅವರು, ಮಂಗಳವಾರ ಸಂಜೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಚಳ್ಳಕೆರೆ, ಬೊಮ್ಮಸಮುದ್ರ, ರಂಗವ್ವನಹಳ್ಳಿ ಮತ್ತು ಚಳ್ಳಕೆರೆ ಬೆಳಗೆರೆ, ನಾರಾಯಣಪುರ, ಕಲಮರಹಳ್ಳಿ ಗ್ರಾಮಗಳಿಗೆ ನೂತನ ಬಸ್ ಸೌಕರ್ಯವನ್ನು ಉದ್ಘಾಟಿಸಿ ಮಾತನಾಡಿದರು. ಗ್ರಾಮೀಣ ಪ್ರದೇಶದ ಜನರು ಬಸ್‌ಗಳ ತೊಂದರೆ ಅನುಭವಿಸದಂತೆ ಎಚ್ಚರಿಕೆ ವಹಿಸಲಾಗುವುದು ಎಂದರು. ಪ್ರಾಸ್ತಾವಿಕವಾಗಿ ಮಾತನಾಡಿದ ಡಿಪೋ ವ್ಯವಸ್ಥಾಪಕ ಪ್ರಭು, ಶಾಸಕರ ಸೂಚನೆಯಂತೆ ಎರಡು ಹೊಸ ಬಸ್ ಮಾರ್ಗಗಳಲ್ಲಿ ಬಸ್ ಸಂಚಾರ ಆರಂಭವಾಗಿದೆ. ಇನ್ನೂ ಕೆಲವು ಗ್ರಾಮೀಣ ಪ್ರದೇಶಗಳಿಗೆ ಬಸ್‌ಗಳ ಸೌಕರ್ಯವನ್ನು ಕಲ್ಪಿಸುವಂತೆ ಮನವಿ ಬಂದಿವೆ. ಶಾಸಕ ಹಾಗೂ ಸಂಸ್ಥೆಯ ಹಿರಿಯ ಅಧಿಕಾರಿಗಳೊಂಧಿಗೆ ಚರ್ಚಿಸಿ ಹಂತ, ಹಂತವಾಗಿ ವ್ಯವಸ್ಥೆ ಮಾಡುವುದಾಗಿ ತಿಳಿಸಿದರು. ಪರಶುರಾಮಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಎಸ್.ಶಶಿಧರ, ನಗರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಜೆ.ರಾಘವೇಂದ್ರ, ಕುಶಲಕರ್ಮಿ ವಿಭಾಗದರಾಜ್ಯಾಧ್ಯಕ್ಷ ಆರ್.ಪ್ರಸನ್ನಕುಮಾರ್, ಎಂ.ಚೇತನ್‌ಕುಮಾರ್, ಜಿಲ್ಲಾ ಕೆಡಿಪಿ ನಾಮನಿರ್ದೇಶನ ಸದಸ್ಯ ಓ.ರಂಗಸ್ವಾಮಿ, ಹನುಮಂತಪ್ಪ, ವೀರೇಶ್, ಮಂಜುನಾಥ, ಕೃಷ್ಣ, ರಾಜಣ್ಣ ಮುಂತಾದವರು ಉಪಸ್ಥಿತರಿದ್ದರು.

ರಸ್ತೆ ಅಪಘಾತ ವ್ಯಕ್ತಿ ಮರಣ: ಪತ್ತೆಗೆ ಮನವಿ

» ಚಿತ್ರದುರ್ಗ

ಬೆಂಗಳೂರು–ಹಿರಿಯೂರು ಎನ್‌ಹೆಚ್ 48 ರಸ್ತೆಯ ರವಿ ಹೋಟೆಲ್ ಮುಂಭಾಗದಲ್ಲಿ ಡಿ.16 ರಂದು ಜರುಗಿದ ಅಪಘಾತದಲ್ಲಿ ಸುಮಾರು 60 ವರ್ಷ ವಯಸ್ಸಿನ ವ್ಯಕ್ತಿಗೆ ಕಾರು ಡಿಕ್ಕಿ ಹೊಡೆದಿದೆ. ಈ ವ್ಯಕ್ತಿಯನ್ನು ಚಿಕಿತ್ಸೆಗಾಗಿ ಹಿರಿಯೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೆ ಡಿ.20 ರಂದು ವ್ಯಕ್ತಿ ಮೃತ ಪಟ್ಟಿರುತ್ತಾರೆ. ಮೃತ ವ್ಯಕ್ತಿ 5.5 ಅಡಿ ಎತ್ತರವಿದ್ದು, ಸಾದರಣ ಮೈಕಟ್ಟು, ಕೋಲು ಮುಖ, ಎಣ್ಣೆಗೆಂಪು ಮೈಬಣ್ಣ ಹೊಂದಿದ್ದು, ತಲೆಯಲ್ಲಿ ಕಪ್ಪು ಮತ್ತು ಬಿಳಿ ಮಿಶ್ರಿತ ಕೂದಲು ಇವೆ. ಅಪಘಾತ ಸಂದರ್ಭದಲ್ಲಿ ಬಿಳಿ ಷರ್ಟ್ ಧರಿಸಿದ್ದು, ಷರ್ಟ್ ಕೊರಳ ಪಟ್ಟಿಯಲ್ಲಿ ಎ.ವಿ.ಎಂ. ಟೈಲರ್ ಸಿಟಿಎ ಎಂದು ಇಂಗ್ಲೀಷ್‌ನಲ್ಲಿ ಬರೆದ ಲೇಬಲ್ ಇದೆ. ಕಪ್ಪು ಬಣ್ಣದ ಪ್ಯಾಂಟ್ ಇದೆ. ಈ ಪ್ರಕರಣ ಹಿರಿಯೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದು, ಮೃತ ವ್ಯಕ್ತಿಯ ಮಾಹಿತಿ ತಿಳಿದ್ದು ಬಂದಲ್ಲಿ ಹಿರಿಯೂರು ಗ್ರಾಮಾಂತರ ಠಾಣೆ 08193 267555, ಡಿವೈಎಸ್ಪಿ ಕಚೇರಿ 08193 263499, ಜಿಲ್ಲಾ ನಿಸ್ತಂತು ಕೇಂದ್ರ 08194 222782 ಗೆ ಸಂಪರ್ಕಿಸಬಹುದು.

ಮೊಳಕಾಲ್ಮೂರು ಶಾಸಕ ಎನ್.ವೈ ಗೋಪಾಲಕೃಷ್ಣ ಹೇಳಿಕೆ

ತಾಯಿ ಆರ್ಶೀವಾದದಿಂದ 7 ಬಾರಿ ಶಾಸಕ

» ನಾಯಕನಹಟ್ಟಿ

ಎಲ್ಲಿ ನನ್ನ ಕೋಪ ಇರುತ್ತಿದಿಯೋ ಅದು ಪ್ರೀತಿ ವಿಶ್ವಾಸ ಎಂದು ಅರ್ಥ ಎಂದು ಮೊಳಕಾಲ್ಮೂರು ವಿಧಾನಸಬಾ ಕ್ಷೇತ್ರದ ಎನ್.ವೈ ಗೋಪಾಲಕೃಷ್ಣ ಹೇಳಿದರು. ನಾಯಕನಹಟ್ಟಿ ಪಟ್ಟಣದ ವಿದ್ಯಾ ವಿಕಾಸ ಶಾಲೆಯ ರಜತ ಸಂಭ್ರಮವನ್ನು ಶ್ರೀ ಗುರು ತಿಪ್ಪೇರುದ್ರಸ್ವಾಮಿ ಒಳಮಠ ಸಮುದಾಯ ಭವನದಲ್ಲಿ ವಿದ್ಯಾ ವಿಕಾಸ ಸಂಸ್ಥೆಯ ರಜತ ಸಂಭ್ರಮ ಉದ್ಘಾಟನೆ ಮಾಡಿದರು.

ನಂತರ ಮಾತಾನಾಡಿದ ಅವರು ಬಳ್ಳಾರಿ ಕ್ಷೇತ್ರದ ಶಾಸಕನಾದ ಸಮಯದಲ್ಲಿ 450 ಶಾಲೆಗಳು 380 ಅಂಗನವಾಡಿ ಕೇಂದ್ರಗಳು ಸಾಕಷ್ಟು ಅನುದಾನ ತಂದು ಅಭಿವೃದ್ಧಿ ಪಡಿಸಿದ್ದೇನೆ ಎಂದರು.

ಇತ್ತೀಚಿನ ಮಕ್ಕಳು ಮೊಬೈಲ್ ಹಾಗೂ ಟಿ.ವಿ ವಿಕ್ಷೇಣೆಯಲ್ಲಿ ಹೆಚ್ಚಿನ ಸಮಯ ಕಳೆಯುತ್ತಿರುವುದರಿಂದ ಉತ್ತಮ ಶಿಕ್ಷಣ ಪಡೆಯಲು ಆದುವುದಿಲ್ಲ ಆಗಾಗೇ ಮಕ್ಕಳ ಕೈಗೆ ಮೊಬೈಲ್ ಕೊಡುವುದು ಸೇರಿದಂತೆ ಟಿ.ವಿ ವಿಕ್ಷೇಣೆ ಮಾಡದಂತೆ ಪೋಷಕರು ಹೆಚ್ಚರವಹಿಸಬೇಕು ಮಕ್ಕಳು ಸಧೃಡರಾಗಬೇಕು ನಿಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕೆಂದು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಈ ವಿದ್ಯಾಸಂಸ್ಥೆಯು ಉತ್ತಮವಾಗಿ ಬೆಳೆಯುತ್ತಿದೆ ಇದು ನಾಯಕನಹಟ್ಟಿ ಚಳ್ಳಕೆರೆಗೆ ಸೀಮಿತ ಅಲ್ಲ ಚಿತ್ರದುರ್ಗ ಜಿಲ್ಲೆಗೆ ಮಾದರಿಯಾಗಿದೆ ಈ ಶಾಲೆಯ ಆಡಳಿತ ವರ್ಗದವರ ಮಾರ್ಗದರ್ಶನ ಹಾಗೂ ಪೋಷಕರು ಸೇರಿ ವಿದ್ಯಾರ್ಥಿಗಳ ಶಿಸ್ತು, ಸ್ವಚ್ಛತೆ, ಹಾಗೂ ಅವರ ಭವಿಷ್ಯವನ್ನು ರೂಪಿಸುವ ಗುರಿ ಆಗಿರುತ್ತದೆ, ನಮ್ಮ ಸಮಾಜಕ್ಕೆ ಮಹಾನ್ ವ್ಯಕ್ತಿಗಳಾದ ರಾಷ್ಟ್ರಪತಿ ಅಬ್ದುಲ್ ಕಲಾಂ, ಸ್ವಾಮಿ ವಿವೇಕನಂದಾ,

ಬಿ.ಆರ್ ಆಂಬೇಡ್ಕರ್ ಇವರು ರಾತ್ರಿ ಸಮಯಲ್ಲಿ ದೀಪದ ಮುಖಾಂತರ ವಿದ್ಯಾಬ್ಯಾಸ ಮಾಡಿ ನಮಗೆ ಸಮಾಜ ಸೇವೆ ಸಲ್ಲಿಸಿ ಇವರು ಮಾರ್ಗದರ್ಶಕರು ಆಗಿದ್ದಾರೆ, ದಯಮಾಡಿ ಪೋಷಕರು ತಮ್ಮ ಮಕ್ಕಳ ಬಗ್ಗೆ ಜೀವನದ ಹಿತದೃಷ್ಟಿಯಿಂದ ಮಕ್ಕಳ ಬಗ್ಗೆ ಜವಾಬ್ದಾರಿ ತಗೆದುಕೊಳ್ಳಿ, ಶತ್ರುಗಳಿಂದ ಒಂದು ಭಾರಿ ನಾನು ವಿಧಾನಸಭಾ ಚುನಾವಣೆಯಲ್ಲಿ ಸೋಲನ್ನು ಅನುಭವಿಸಿದೆ ಆದರೂ ನಾನು ಧೃತಿಗೇಡಲಿಲ್ಲ ಶ್ರೀ ಗುರು ತಿಪ್ಪೇರುದ್ರಸ್ವಾಮಿಯ ಆರ್ಶಿವಾದದಿಂದ ಏಳು ಬಾರಿ ನಾನು ಶಾಸಕನಾದೆ ಎಂದು ಮೊಳಕಾಲ್ಮೂರು ವಿಧಾನಸಬಾ ಕ್ಷೇತ್ರದ ಎನ್.ವೈ ಗೋಪಾಲಕೃಷ್ಣ ಹೇಳಿದರು.

ಕಳೆದ ಇಪ್ಪತ್ತೈದು ವರ್ಷಗಳಿಂದ ಸಂಸ್ಥೆಯು ಯಶ್ವಸಿಯಾಗಿ ನಡೆದುಕೊಂಡು ಬಂದಿದೆ, ನಮ್ಮ ಶಾಲೆಯಲ್ಲಿ 10 ಎಸ್ ಎಸ್ ಎಲ್ ಸಿ ಬ್ಯಾಚ್ ನಿರ್ಗಮನ ಹೊಂದಿದ್ದು, ಇಲ್ಲಿವರಿಗೂ ಮೂರು ವಿದ್ಯಾರ್ಥಿ ಮಾತ್ರ ಅನುಉತ್ತಿರ್ಣ ಹೊಂದಿದ್ದಾರೆ, ನಮ್ಮ ಸಂಸ್ಥೆಯಲ್ಲಿ ವಿದ್ಯಾಬ್ಯಾಸ ಮಾಡಿದ 40 ವಿದ್ಯಾರ್ಥಿಗಳು ಎಂ.ಬಿ.ಬಿ.ಎಸ್, 200 ವಿದ್ಯಾರ್ಥಿಗಳು ಇಂಜಿನಿಯರ್, 40 ಶಿಕ್ಷಕರು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಖಾಸಗಿ, ಸರ್ಕಾರಿ ಸೇವೆ ಸ್ವ ಉದ್ಯೋಗ ಮಾಡುತ್ತಿದ್ದಾರೆ ಎಂದು ಸಂಸ್ಥೆಯ ಕಾರ್ಯದರ್ಶಿಯಾದ ಕೆ.ಎಂ ಶಿವಸ್ವಾಮಿಯವರು ಹೇಳಿದರು.

ವಿದ್ಯಾರ್ಥಿಗಳಿಗೆ ಅವರದೇ ಆದ ಒಂದು ಪ್ರತಿಬೆ ಇರುತ್ತೆ ಅದನ್ನು ಮಾಡಲು ಎಲ್ಲಾ ಪೋಷಕರು ತಮ್ಮ ಮಕ್ಕಳಗೆ ಸಹಕಾರ ನೀಡಬೇಕು, ಭಾರತೀಯ ವಿಜ್ಞಾನ ಸಂಶೋದನೆ ಸಂಸ್ಥೆ ವತಿಯಂದ 892 ಶಾಲೆಗಳು ಇವೆ, ವಿದ್ಯಾರ್ಥಿಗಳಿಗೆ ಅನುಕೂಲ ಆಗಲು ಶೌಚಲಯ, ಸೋಲಾರ್ ಅಳವಡಿಕೆ, ಸರ್ಕಾರಿ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 18 ಸಾವಿರ ಶಿಕ್ಷಕರಿಗೆ ತರಬೇತಿ ನೀಡಲಾಗುವುದು, ಮುಂದಿನ ದಿನಗಳಲ್ಲಿ ಖಾಸಗಿ ಶಾಲೆಯ ಶಿಕ್ಷಕರಿಗೂ ತರಬೇತಿ ನೀಡಲು ತಿರ್ಮಾನಿಸಿದ್ದವೆ ಎಂದು ಸ್ಕಿಲ್ ಡೆವಲಪ್‌ಮೆಂಟ್ ಸೆಂಟರ್ ಐಐಎಸ್ಸಿ ಡಾ॥. ಬಿ. ಸುಬ್ಬಾರೆಡ್ಡಿ ಸಂಚಾಲಕರು ಹೇಳಿದರು.

ಪೋಷಕರು–ಶಿಕ್ಷಕರ ಶಾಲಾ ಶಿಕ್ಷಣದಲ್ಲಿ ಪ್ರಮುಖ ಅಂಶವಾಗಿದೆ ಏಕೆಂದರೆ ಪೋಷಕರು ಶಿಕ್ಷಕರೊಂದಿಗೆ ಸಂಪರ್ಕ ಸಾಧಿಸಲು ಮತ್ತು ತಮ್ಮ ಮಗುವಿನ ಶೈಕ್ಷಣಿಕ ಪ್ರಗತಿಯ ಮೌಲ್ಯಮಾಪನ ಬಗ್ಗೆ ಚರ್ಚಿಸಲು ಮತ್ತು ತಮ್ಮ ಮಗುವಿನ ಕಲಿಕೆಯ ಸಾಮರ್ಥ್ಯವನ್ನು ಬೆಂಬಲಿಸಲು ತಂತ್ರಗಳನ್ನು ಅಭಿವೃದ್ಧಿಪಡಿಸಲು ಅವಕಾಶವನ್ನು ಪಡೆಯಬೇಕು. ಮಕ್ಕಳಿಗೆ ಯಶಸ್ವಿ ಶೈಕ್ಷಣಿಕ ಅನುಭವವನ್ನು ಬೆಳೆಸಲು ಪೋಷಕರು–ಶಿಕ್ಷಕರ ಸಭೆ ಅತ್ಯಗತ್ಯ. ರಜತ ಸಂಭ್ರಮವನ್ನು ಮಾಡಲು ಪೋಷಕರಿಗೆ ಸಲಹೆಗಳನ್ನು ನೀಡುತ್ತದೆ. ಆದ್ದರಿಂದ, ನಾವು ಓದೋಣ. ಪೋಷಕರು–ಶಿಕ್ಷಕರ ಸಭೆಯು ಪೋಷಕರು ತಮ್ಮ ಮಗುವಿನ ಶೈಕ್ಷಣಿಕ ಪ್ರಗತಿ, ಸಾಮರ್ಥ್ಯಗಳು ಮತ್ತು ಸುಧಾರಣೆಯ ಕ್ಷೇತ್ರಗಳನ್ನು ಆಳವಾಗಿ ನೋಡಲು ಅವಕಾಶವನ್ನು ಒದಗಿಸುತ್ತದೆ. ಪೋಷಕರು–ಶಿಕ್ಷಕರ ಸಭೆಯ ಸಮಯದಲ್ಲಿ, ಶಿಕ್ಷಕರು ತಮ್ಮ ಮಗುವಿನ ತರಗತಿಯಲ್ಲಿನ ಕಾರ್ಯಕ್ಷಮತೆಯ ಕುರಿತು ನಿರ್ಣಾಯಕ ಒಳನೋಟಗಳನ್ನು ಪೋಷಕರಿಗೆ ಒದಗಿಸುತ್ತಾರೆ ಮತ್ತು ಅದರ ಪ್ರಕಾರ ಅವರ ಕಲಿಕೆಯ ಸಾಮರ್ಥ್ಯವನ್ನು ಬೆಂಬಲಿಸಲು ತಂತ್ರಗಳನ್ನು ಸೂಚಿಸುತ್ತಾರೆ. ವಿದ್ಯಾ ವಿಕಾಸ ಶಾಲೆಯ ಪೋಷಕರಿಗೆ ತಮ್ಮ ಮಗುವಿನ ಶಿಕ್ಷಣದ ಬಗ್ಗೆ ತಮ್ಮ ಕಾಳಜಿ ಅಥವಾ ಪ್ರಶ್ನೆಗಳನ್ನು ಹಂಚಿಕೊಳ್ಳಲು ಅವಕಾಶವನ್ನು ಒದಗಿಸುತ್ತದೆ. ಈ ದ್ವಿಮುಖ ಸಂವಹನವು ಪೋಷಕರು ಮತ್ತು ಶಿಕ್ಷಕರು ಒಂದೇ ಪುಟದಲ್ಲಿದ್ದಾರೆ ಮತ್ತು ಮಗುವಿನ ಶೈಕ್ಷಣಿಕ ಪ್ರಗತಿಯನ್ನು ಬೆಂಬಲಿಸಲು ಒಟ್ಟಿಗೆ ಕೆಲಸ ಮಾಡಬಹುದು ಎಂದು ಖಚಿತಪಡಿಸಿಕೊಳ್ಳಲು ಸಹಾಯ ಮಾಡುತ್ತದೆ.

ಪ್ರತಿ ವರ್ಷ ಎಸ್.ಎಸ್.ಎಲ್.ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ 5,000/– ಪೋತ್ಸಾಹ ಧನವನ್ನು ಕೊಪ್ಪಳ ವಂಶಸ್ಥರಾದ ನಮ್ಮ ತಂದೆ ತಾಯಿಯ ಹೆಸರಿನಲ್ಲಿ ನೀಡುತ್ತೇನೆ ಎಂದು ಹಿರಿಯ ವಕೀಲರಾದ ಕೆ.ಎನ್. ವಿಶ್ವನಾಥಯ್ಯನವರು ಭರವಸೆ ನೀಡಿದರು.

ಈ ಸಂಧರ್ಭ ಉಪಸ್ಥಿತಿರಾದ ಕೆ.ಎಸ್ ಸುರೇಶ್ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪಟ್ಟಣ ಪಂಚಾಯ್ತಿ ಸದಸ್ಯರಾದ ಶ್ರೀಮತಿ ಟಿ.ಮಂಜುಳ, ಶ್ರೀಮತಿ ಡಿ.ಸುನೀತ, ಶ್ರೀಮತಿ ಓ.ಮಹೇಶ್ವರಿ, ಶ್ರೀ ಸೈಯದ್ ಅನ್ವರ್, ಶ್ರೀಮತಿ ಸರ್ವಮಂಗಳ, ಉಮಾಪತಿ ವಕೀಲರು, ಅಬಕಾರಿ ತಿಪ್ಪೇಸ್ವಾಮಿ, ನಾಯಕನಹಟ್ಟಿ ಪಿಎಸೈ ದೇವರಾಜ್, ದೇವರಹಳ್ಳಿ ರಾಜಣ್ಣ ಹಾಗೂ ವಿದ್ಯಾವಿಕಾಸ ಶಾಲೆಯ ಶಿಕ್ಷಕ ವರ್ಗದವರು, ಪೋಷಕರು, ವಿದ್ಯಾರ್ಥಿಗಳು, ಹಿರಿಯ ಮುಖಂಡರರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬೆಲಗೂರಿನ ಲಕ್ಷ್ಮಿನಾರಾಯಣ ಸ್ವಾಮಿ, ಶ್ರೀ ಆಂಜನೇಯ ಸ್ವಾಮಿ ಬ್ರಹ್ಮರಥೋತ್ಸವ

» ಹೊಸದುರ್ಗ

ತಾಲೂಕಿನ ಬೆಲಗೂರು ಗ್ರಾಮದಲ್ಲಿ ಐತಿಹಾಸಿಕ ಲಕ್ಷ್ಮಿನಾರಾಯಣ ಸ್ವಾಮಿ ಹಾಗೂ ಶ್ರೀ ವೀರಪ್ರತಾಪಆಂಜನೇಯ ಸ್ವಾಮಿ ಮಹಾ ಬ್ರಹ್ಮರಥೋತ್ಸವ ಬೆಲಗೂರಿನ ಮಾರುತಿ ಪೀಠದ ವಿಜಯ ಮಾರುತಿ ಶರ್ಮ ಸ್ವಾಮೀಜಿಯವರ ನೇತೃತ್ವದಲ್ಲಿ ಸಾವಿರಾರು ಭಕ್ತರ ಸಮುಖದಲ್ಲಿ ವಿಜೃಂಭಣೆಯಿಂದ ನೇರವೇರಿತು.

ಬ್ರಹ್ಮರಥೋತ್ಸವದ ನಿಮಿತ್ತ ಇಡೀ ಗ್ರಾಮ ಸಿಂಗಾರಗೊಂಡಿತ್ತು. ತೇರಿಗೆ ವಿವಿಧ ಹೂ ಹಾಗೂ ತಳಿರು ತೋರಣಗಳಿಂದ ಅಲಂಕಾರ ಮಾಡಲಾಗಿತ್ತು. ಜಾನಪದ ಕಲಾತಂಡಗಳು ಭಾಗವಹಿಸಿದ್ದವು. ರಥ ಮುಂದೆ ಸಾಗುತ್ತಿದ್ದಂತೆಯೇ ಭಕ್ತರು ಭಾಳೆ ಹಣ್ಣುಗಳನ್ನು ತೂರುವ ಮೂಲಕ ಭಕ್ತಿ ಸಮರ್ಪಿಸಿದರು.

ಪೀಠದ ಆವರಣದಲ್ಲಿರುವ ಮಹಾಲಕ್ಷ್ಮೀ, ಮಾರುತಿ, ಲಕ್ಷ್ಮೀನಾರಾಯಣ ದೇವಾಲಯದಲ್ಲಿ ವಿಶೇಷ ಪೂಜೆ ಪುನಸ್ಕಾರಗಳು ನಡೆದವು. ಭಕ್ತರು ಸರತಿ ಸಾಲಿನಲ್ಲಿ ನಿಂತುದೇವರದರ್ಶನ ಪಡೆದರು ಹಾಗೂ ತಮ್ಮ ಇಷ್ಟಾರ್ಥಗಳನ್ನು ಈಡೇರಿಸುವಂತೆ ದೇವರಲ್ಲಿ ಪ್ರಾರ್ಥಿಸಿದರು.

ರಾಜ್ಯದ ನಾನಾ ಭಾಗಗಳಿಂದ ಭಕ್ತರು ಆಗಮಿಸಿದ್ದರು. ಎಲ್ಲರಿಗೂ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.ತದನಂತರ ಶ್ರೀರಾಮ ಸಾಮ್ರಾಜ್ಯ ಪಟ್ಟಾಭೀಷೇಕ, ಉತ್ಸವಗಳು

ನಡೆದವು.

ಬೆಲಗೂರಿನ ಮಾರುತಿ ಪೀಠದ ವಿಜಯ ಮಾರುತಿ ಶರ್ಮ ಸ್ವಾಮೀಜಿಯವರು ಕಳೆದ ನಾಲ್ಕು ದಿನಗಳ ಹಿಂದೆಯೇ ಹನುಮ ಜಯಂತಿಯ ಕಾರ್ಯಕ್ರಮಗಳಿಗೆ ವಿದ್ಯುಕ್ತವಾಗಿ ಚಾಲನೆ ನೀಡಿದರು.

ಶ್ರಿ ಕ್ಷೇತ್ರದ ಅವಧೂತರಾದ ಶ್ರಿ ಬಿಂದುಮಾಧವ ಶರ್ಮಾರವರ ಮಾರ್ಗದರ್ಶನದಲ್ಲಿ ವಿವಿಧ ಧಾರ್ಮಿಕ ಕೈಂಕರ್ಯದೊಂದಿಗೆ ಆಂಜನೇಯಸ್ವಾಮಿ ಹಾಗೂ ಲಕ್ಷ್ಮಿನಾರಾಯಣಸ್ವಾಮಿಯವರರಾಜಬೀದಿ ಉತ್ಸವದೊಂದಿಗೆ ಬ್ರಹ್ಮರಥೋತ್ಸವ ಎಳೆಯಲಾಯಿತು. ಈ ಧಾರ್ಮಿಕ ಕಾರ್ಯದಲ್ಲಿ ರಾಜ್ಯ,ಹೊರ ರಾಜ್ಯಗಳಿಂದ ಸಹಸ್ರಾರು ಭಕ್ತರು ಆಗಮಿಸಿ ದೇವರ ಹಾಗೂ ಬೆಲಗೂರಿನ ಮಾರುತಿ ಪೀಠದ ವಿಜಯ ಮಾರುತಿ ಶರ್ಮ ಸ್ವಾಮೀಜಿಯವರ ದರ್ಶನ ಆಶೀರ್ವಾದ ಪಡೆದರು. ಬ್ರಹ್ಮರಥೋತ್ಸವದಲ್ಲಿ ಶಾಸಕ ಬಿ.ಜಿ.ಗೋವಿಂದಪ್ಪ ಸೇರಿದಂತೆ ನಾಡಿನ ಹಲವಾರು ಕಡೆಗಳಿಂದ ರಾಜಕೀಯ ಮುಖಂಡರುಗಳು, ಜನಪ್ರತಿನಿಧಿಗಳು ಮತ್ತು ನಾಡಿನ ಹಲವಾರು ಮಠಗಳ ಮಠಾಧೀಶರುಗಳು ಸಹಸ್ರಾರು ಸಂಖ್ಯೆಯಲ್ಲಿ ಸಾಧು–ಸಂತರು ಭಾಗವಹಿಸಿದ್ದರು.

ತಾಲೂಕ ಮಟ್ಟದ ಮಹಿಳಾ ವಿಚಾರಗೋಷ್ಠಿ ಕಾರ್ಯಕ್ರಮ

» ಹೊಸದುರ್ಗ

ಪಟ್ಟಣದ ಶ್ರೀ ಹಾಲು ರಾಮೇಶ್ವರ ಯೋಜನಾ ಕಚೇರಿಯ ನಗರ ವಲಯದಲ್ಲಿ ತಾಲೂಕ ಮಟ್ಟದ ಮಹಿಳಾ ವಿಚಾರಗೋಷ್ಠಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ಕಾರ್ಯಕ್ರಮವನ್ನು ಹೊಸದುರ್ಗ ಸಿವಿಲ್ ನ್ಯಾಯಾಧೀಶರಾದ ಶ್ರೀ ಶಿವರಾಜ್‌ಎಚ್.ಎಸ್ ಉದ್ಘಾಟಿಸಿ ಧರ್ಮಸ್ಥಳ ಯೋಜನೆ ಸಮಾಜದಲ್ಲಿ ಜನರಿಗೆ ಬೇಕಾದಂತ ಜನಯುಪಯೋಗಿ ಕಾರ್ಯಕ್ರಮಗಳನ್ನು ಮಾಡುತ್ತಿರುವುದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಪನ್ಮೂಲ ವ್ಯಕ್ತಿ ಹಾಗೂ ಉದ್ಯಮಿ ಸದ್ಗುರು ಆಯುರ್ವೇದ ಕಂಪನಿ ಮಾಲಿಕರಾದ ಡಿ.ಎಸ್.ಪ್ರದೀಪ್ ಮಾತನಾಡಿ ಮಹಿಳೆಯರು ತಾವು ಸ್ವಉದ್ಯೋಗ ಮಾಡಬೇಕಾದರೆ ಏನಿಲ್ಲ ವಿಚಾರಗಳನ್ನು ಮೈಗೂಡಿಸಿಕೊಳ್ಳಬೇಕು. ಸಮಾಜದಲ್ಲಿ ಹೇಗೆ ಇನ್ನೊಬ್ಬರೊಟ್ಟಿಗೆ ಬೆರೆಯಬೇಕು ಯಾವ ಉದ್ಯೋಗವನ್ನು ಆಯ್ಕೆ ಮಾಡಿಕೊಂಡರೆ ಒಳ್ಳೆಯದು. ಇತ್ತೀಚಿನ ಯುವ ಪೀಳಿಗೆ ಹೆಚ್ಚಾಗಿ ಮೊಬೈಲನ್ನು ಬಳಸುತ್ತಿದ್ದು ಇದಕ್ಕೆ ತಾಯಂದಿರು ಕಡಿವಾಣ ಹಾಕಬೇಕಾದರೆ ಮಕ್ಕಳಲ್